|| ಗಂ ಗಣಪತಯೇ ನಮಃ ||

ವೇದಸಂಶೋಧನೆ

: ಲೇಖಕರು :

ಡಾ|| ಎಚ್. ಎಸ್. ಸುಬ್ರಹ್ಮಣ್ಯಶಾಸ್ತ್ರೀ.

★

ಬೆಲೆ :

ಶ್ರೀ ಗಣೇಶ್ ಪ್ರಿಂಟರ್ಸ್,
ನಂಜನಗೂಡು.

ಅಭಿಪ್ರಾಯ

ಓಂ

ಶ್ರೀ ಭಾಗವತೀಯ ಜಗದ್ಗುರು ಶ್ರೀ ಬಾಲಕೃಷ್ಣಾನಂದ ಸಂಸ್ಥಾನಂ
ತ ಲ ಕಾ ಡು .

ಸಂಸ್ಥಾನದ ಪೀಠಾಧ್ಯಕ್ಷ
ಶ್ರೀ ಶ್ರೀ ಬ್ರಹ್ಮಾನಂದ ಸರಸ್ವತೀ ಸ್ವಾಮಿಗಳವರು

** ** ** ** **

ಗ್ರಂಥದ ವಿಷಯವೇನೋ ಸಾಮಾನ್ಯರ ಮನವನ್ನೊಪ್ಪಿಸಲು ಕ್ಲಿಷ್ಟವಾದುದಾದರೂ ಶಾಸ್ತ್ರಜ್ಞರೂ ವೇದಪ್ರಾಮಾಣ್ಯವುಳ್ಳ ಧೀಮಂತರಿಗೂ ಅಚ್ಚರಿಯನ್ನುಂಟುಮಾಡುವ ರೀತಿಯಲ್ಲಿ ಹೊರಟಿರುವುದು ಮತ್ತು ಅದರಂತೆಯೇ ನಿರ್ವಿಘ್ನವಾಗಿ ಮುಂದುವರಿಯುವುದೆಂಬ ಭರವಸೆಯೂ ಶ್ಲಾಘನೀಯವು.

ತಮ್ಮ ನಿರ್ದಿಷ್ಟವಾದ ಪ್ರಜಾಸೇವಾನಿರ್ವಹಣೆಯ ಜೊತೆಗೆ ಈ ಮಹತ್ತರವಾದ ಶೋಧನಾಭಾರವೂ ಸುಸೂತ್ರವಾಗಿಯೂ ಸರ್ವಸಮರ್ಪಕವಾಗಿಯೂ ಮುಂದುವರಿಯಲು ನಮ್ಮ ಆರಾಧ್ಯದೇವರಾದ ಶ್ರೀ ಬಾಲಗೋಪಾಲಕೃಷ್ಣನೂ ಉಪಾಸನಾಮೂರ್ತಿಯಾದ ಶ್ರೀ ಲಕ್ಷ್ಮೀನೃಸಿಂಹನೂ ತಮಗೆ ತಕ್ಕ ಆಯುರಾರೋಗ್ಯ ಸಹಿತವಾದ ಉತ್ಸಾಹವನ್ನು ಅನುಗ್ರಹಿಸಲೆಂದು ನಿರಂತರ ಪ್ರಾರ್ಥಿಸುತ್ತಲಿರುತ್ತೇವೆ.

ಇತಿ ನಾರಾಯಣಸ್ಮರಣ
ಪೂರ್ವಕವೇದೋಕ್ತಾಶಿಷಃ
ಶ್ರೀ ಬ್ರಹ್ಮಾನಂದ ಸರಸ್ವತೀ
ಸ್ವಾಮಿಗಳವರು.

ತಾ|| 6-1-69

॥ ಗಂ ಗಣಪತಯೇ ನಮಃ ॥

“ ವೇದಸಂಶೋಧನೆ ”

ಎನ್. ಎಸ್. ಸುಬ್ರಹ್ಮಣ್ಯಶಾಸ್ತ್ರೀ

ಪ್ರಥಮ ಮುದ್ರಣ 1968
ದ್ವಿತೀಯ ಮುದ್ರಣ 1969

(ಎಲ್ಲ ಹಕ್ಕುಗಳನ್ನೂ ಕಾದಿರಿಸಲಾಗಿದೆ)

★

ಬೆಲೆ : ೧ ರೂಪಾಯಿ.

ಪುಸ್ತಕ ದೊರೆಯುವ ಸ್ಥಳ:–

ನಿಯೋ ಫಾರ್ಮಸಿ,
301, ಡಿ. ಸುಬ್ಬಯ್ಯ ರೋಡ್,
ಮೈಸೂರು – 1

ನನ್ನ ವಿದ್ಯಾರ್ಜನೆಗೆ ಪೂರ್ಣ ನೆರವು ನೀಡಿದ
ನನ್ನ ಪೂಜ್ಯ ಅಕ್ಕನವರು

ಮಾತೃಶ್ರೀ ತಾಯಕ್ಕನವರ
(ಮಾ॥ ಪಾರ್ವತಮ್ಮ)

ನೆನಪಿಗಾಗಿ

—: ಪೀಠಿಕೆ :—

ಭಾರತಕ್ಕೇ ಮೀಸಲಾದ 'ವೇದ' ಎಂಬುದು, ಭಾರತಮಾತೆಯ ಅಮೂಲ್ಯಕಂಠರತ್ನ. 'ಕ್ಷೇತ್ರ' ಮತ್ತು 'ಕ್ಷೇತ್ರಜ್ಞ'ರ ಮೈತ್ರೀಯುತ ಸಹಕಾರ ಸಿದ್ಧಿಕಾರಿ. ವಿಶ್ವಕ್ಷೇಮಕಾರಿ. ಮಾನವನ ಮತ್ತು ವಿಶ್ವದ ಎಲ್ಲ ಭೂತರಾಶಿಯ ಸರ್ವತೋಮುಖ ಪ್ರಗತಿಗಾಗಿ 'ಶ್ರೌತ' ಮತ್ತು 'ಸ್ಮಾರ್ತ' ಕರ್ಮಗಳು ಉಕ್ತವಾಗಿವೆ. ನನ್ನ ತಮ್ಮಂದಿರು ವೇ॥ ಬ್ರಂ॥ ಶ್ರೀ॥ ದೀಕ್ಷಿತ ಎನ್. ಎಸ್. ದೊರೆಸ್ವಾಮಿಸೋಮಯಾಜಿಗಳು ಸೋಮಯಾಗ, ಗರುಡ ಚಯನ ಇತ್ಯಾದಿ ಅನೇಕ 'ಶ್ರೌತ' ಕರ್ಮಗಳನ್ನು ಆಚರಿಸಿದ್ದನ್ನು ನೋಡಿ, ಈ ಕರ್ಮಗಳ ಸ್ವರೂಪವೇನು? ಎಂದು ವಿಮರ್ಶೆಮಾಡಲು ಹೊರಟಿದ್ದರಿಂದ ಈ 'ವೇದ' ಸಾಹಿತ್ಯದಲ್ಲಿ ಅಡಗಿರುವ. ವೈಜ್ಞಾನಿಕ ಅಂಶವು ಗೋಚರ ವಾಯಿತು. ಈ ಅಂಶವನ್ನು ಆಸಕ್ತಿ ಉಳ್ಳವರ ಮುಂದೆ ಇಡುವುದೇ. ಈ ಗ್ರಂಥಪ್ರಕಾಶನದ ಧ್ಯೇಯವು. 'ವೇದ' ಸಾಹಿತ್ಯದಲ್ಲಿ ಅನೇಕ ಅಂಶಗಳು ಅಡಗಿವೆ. ಇಲ್ಲಿ ವಿಮರ್ಶಿತವಾಗಿರುವುದು, ವೈಜ್ಞಾನಿಕ ದೃಷ್ಟಿಕೋಣದ ಕೆಲವಂಶಗಳು ಮಾತ್ರ, ಎಂದು ಮತ್ತೊಮ್ಮೆ ತಿಳಿಸಲು ಅಪೇಕ್ಷಿಸುತ್ತೇನೆ.

ಈ ಸಂದರ್ಭದಲ್ಲಿ ಶ್ರೌತಕರ್ಮಾನುಷ್ಠಾನಕಾಲದಲ್ಲಿ, ಪಶುವಧೆ ಮತ್ತು ಪಶ್ವಂಗಹೋಮವು, ಪುಣ್ಯಕಾರ್ಯವಾಗಿ ಘೋಷಿತವಾಗಿದೆ. ಹೇಗೆಂದರೆ "ಯಜ್ಞೋದಾನಂ ತಪಶ್ಚೈವ ಪಾವನಾನಿ ಮನೀಷಿಣಾಂ". 'ವೇದ'ದಲ್ಲಿ. ಮಾನವ. ಪಶು, ಪಕ್ಷಿ, ಮೃಗ, ಪಿಪೀಲಿಕಾ. ಸಸ್ಯ ಮತ್ತು ಖನಿಜ ಇತ್ಯಾದಿ ಎಲ್ಲದರಲ್ಲೂ ಆತ್ಮನಿದ್ದಾನೆ. ಮಾನವನು ಎಲ್ಲದರಲ್ಲೂ ದಯೆಯಿಂದ ವರ್ತಿಸತಕ್ಕದ್ದು. ಹಾಗೆ ವರ್ತಿಸದೆ ಹಿಂಸೆಮಾಡಿದ್ದೇ ಆದರೆ ಪಾಪ, ಎಂದು ನಿತ್ಯಧರ್ಮವನ್ನು ಸೂಚಿಸಿ; ಶ್ರೌತಕರ್ಮಗಳಲ್ಲಿ ಪಶುವಧೆ ಯನ್ನು ವಿಧಿಯನ್ನಾಗಿ ತಿಳಿಸಿದೆ. ಈ ರೀತಿಯಲ್ಲಿ ನಡೆದ ಕರ್ಮವು, ಪಾವನ ವಾದಕರ್ಮ, ಎಂದೂ ಸಾರಿದೆ. ಇದು ಗಮನಾರ್ಹವಿಷಯ. ಅಲ್ಲದೆ ಹಾಗೆ ವಧೆಗೆ ಒಳಗಾದ ಯಜ್ಞಪಶುವಿಗೆ, ಉತ್ತಮಗತಿ ಲಭಿಸುವುದೆಂದೂ

ಸ್ಪಷ್ಟಪಡಿಸಿದೆ. ಅಂದಮೇಲೆ ಪುಣ್ಯ ಮತ್ತು ಪಾಪ ಎಂಬುದನ್ನು ತೀರ್ಮಾನ ಮಾಡುವುದು, ನಮ್ಮ ಮನಬಂದಂತೆ ಅಲ್ಲ. ಅದು ಪೂರ್ಣವಾಗಿ ಶಾಸ್ತ್ರದ ಎಲ್ಲೆಕಟ್ಟಿಗೆ ಸೇರಿದೆ. ಇದೇ ವಿಷಯವನ್ನು ಶ್ರೀಕೃಷ್ಣಪರಮಾತ್ಮನು, ಅರ್ಜುನನಿಗೆ ಪ್ರಕಾಶಪಡಿಸಿದ್ದಾನಲ್ಲದೆ, ಒಂದು ಕರ್ಮದಲ್ಲಿ, ದೋಷ ಇದ್ದರೂ ಕೂಡ, ಶಾಸ್ತ್ರವಿಧಿಯಂತೆ, ಅದನ್ನು ಆಚರಿಸಲೇಬೇಕೆಂಬುದನ್ನೂ ಸಹ ಸ್ಪಷ್ಟಪಡಿಸಿದ್ದಾನೆ. ಹೇಗೆಂದರೆ:

"ಸಹಜಂ ಕರ್ಮ ಕೌನ್ತೇಯ ಸದೋಷಮಪಿ ನ ತ್ಯಜೇತ್ ।
ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ॥"

"ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ ॥"

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ॥

ಅಂದರೆ ನಮ್ಮ ಇಂದ್ರಿಯಗಳಿಗೆ ಹಿತವಲ್ಲದ್ದನ್ನು ತ್ಯಾಗಮಾಡಿ, ನಮ್ಮ ಇಂದ್ರಿಯಗಳಿಗೆ ಹಿತವಾಗುವುದನ್ನು ಮಾತ್ರ ಆಚರಿಸುವುದು, ಅಥವಾ ನಮ್ಮ ಇಂದ್ರಿಯಗಳಿಗೆ ಹಿತವಾಗುವ ರೀತಿಯಲ್ಲಿ, ಶಾಸ್ತ್ರವಿಧಿಯನ್ನೇ ಮಾರ್ಪಾಡು ಮಾಡಿಕೊಳ್ಳುವುದು, ಇಹ ಮತ್ತು ಪರಗಳ ನಾಶಕ್ಕಾಗಿ ಆಗುವುದು. ಶಾಸ್ತ್ರದಲ್ಲಿ ಹೇಗೆ ಉಕ್ತವಾಗಿದೆಯೋ, ಆ ವಿಧಿಯನ್ನೇ ಅನುಸರಿಸಿದರೆ ಮಾತ್ರ. ಇಹ ಮತ್ತು ಪರಗಳು ಸಿದ್ಧಿಸುವುವು. ಎಲ್ಲ ಕಾರ್ಯಾಚರಣೆಗೂ ಶಾಸ್ತ್ರವೇ ಅಂತಿಮ ಪ್ರಮಾಣ; ವ್ಯಕ್ತಿಯು ಪ್ರಮಾಣವಲ್ಲ. ಶ್ರೀಕೃಷ್ಣಪರಮಾತ್ಮನು, ಅರ್ಜುನನಿಗೆ ಧರ್ಮವನ್ನು ತಿಳಿಸುವಾಗ, ತಾನು ಸಾಕ್ಷಾತ್ ವಿಷ್ಣು, ತಾನು ಹೇಳುವುದೇ ಧರ್ಮ, ಅದನ್ನೇ ಅರ್ಜುನನು ಆಚರಿಸತಕ್ಕದ್ದು ಎಂದು ತಿಳಿಸಲಿಲ್ಲಾ; ತನಗಿಂತ ಮೀರಿದ ಪ್ರಮಾಣ ಶಾಸ್ತ್ರ, ಅದರಲ್ಲಿ ನಿರ್ದಿಷ್ಟವಾದ ಕ್ಷತ್ರಿಯಧರ್ಮ ಏನಿದೆಯೋ ಅದನ್ನು ಆಚರಿಸ

ತಕ್ಕದ್ದು ನಿನ್ನ ಧರ್ಮ, ಎಂಬುದಾಗಿ ಸ್ಪಷ್ಟಪಡಿಸಿ 'ಸರ್ವಸ್ಯ ಲೋಚನಂ ಶಾಸ್ತ್ರಂ' ಎಂಬಂತೆ ಶಾಸ್ತ್ರಪ್ರಾಮಾಣ್ಯದ ಮತ್ತು ಸ್ವಧರ್ಮದ ವೈಶಿಷ್ಟ್ಯವನ್ನು ಪ್ರಕಟಿಸಿದ್ದಾನೆ.

ಅಂದರೆ ಪುಣ್ಯ ಮತ್ತು ಪಾಪಸ್ವರೂಪವು ಬಹಳ ಸೂಕ್ಷ್ಮರೀತಿಯಲ್ಲಿದೆ ಹೇಗೆಂದರೆ–

ವೈದ್ಯನ ಧರ್ಮ ಏನೆಂದರೆ, ದುಃಖನಿವಾರಣೆ, ಪ್ರಾಣರಕ್ಷಣೆ ಮತ್ತು ಆರೋಗ್ಯದಾನ. ಈ ಧರ್ಮನಿರತನು ಯಾರಿಗಾದರೂ ವೃಥಾ ನೋವನ್ನು ಉಂಟುಮಾಡಿದರೆ, ಮಹಾಪಾಪವು. ಹೀಗೆ ನಿತ್ಯಧರ್ಮವನ್ನು ಆಚರಿಸುತ್ತಿದ್ದರೂ, ಒಬ್ಬಳು ಗರ್ಭಿಣೀಸ್ತ್ರೀಯು, ಗರ್ಭಸ್ಥಶಿಶುವನ್ನು ಪ್ರಸವಿಸಲು ಅಸಮರ್ಥಳಾದಾಗ, ಆ ಗರ್ಭಸ್ಥಶಿಶುವನ್ನು ಕೊಂದು, ಅಂಗಾಂಗಗಳನ್ನು ಛೇದಿಸಿ ಹೊರತರಬೇಕು. ತಾಯಿಯನ್ನು ರಕ್ಷಿಸಬೇಕು. ಇದು ವೈದ್ಯನ ಪವಿತ್ರಕಾರ್ಯ ಎಂಬ ವಿಶೇಷಧರ್ಮವು ಶಾಸ್ತ್ರದಲ್ಲಿ ಉಕ್ತವಾಗಿರುವುದನ್ನು ಅರಿತು, ಗರ್ಭಸ್ಥಶಿಶುವನ್ನು ಕೊಂದು, ಕತ್ತರಿಸಿ ಹೊರಕ್ಕೆ ತೆಗೆದು ಹಾಕುತ್ತಾನೆ. ಆದಾಗ್ಯೂ ಇದು ಪುಣ್ಯಕಾರ್ಯವೇ ಆಗಿದೆ. ಹೀಗೆಯೇ–

"ಯಜ್ಞಾರ್ಥಂ ಛೇದಿತೋಽಶ್ವತ್ಥೋ ಹ್ಯಕ್ಷಯಂ ಸ್ವರ್ಗಮಾಪ್ನುಯಾತ್ ॥ ಛಿನ್ನೋ ಯೇನ ವೃಥಾಽಶ್ವತ್ಥಶ್ಛೇದಿತಾಃ ಪಿತೃದೇವತಾಃ ಅಶ್ವತ್ಥಃ ಪೂಜಿತೋ ಯತ್ರ ಪೂಜಿತಾಃ ಸರ್ವದೇವತಾಃ ॥" ಎಂದು ಬ್ರಹ್ಮದೇವನು ನಾರದಮಹರ್ಷಿಗೆ ತಿಳಿಸಿರುತ್ತಾನೆ. ಅಂದರೆ ನಿತ್ಯಪೂಜ್ಯವಸ್ತುವಾದ ಅಶ್ವತ್ಥವೃಕ್ಷವು, ಯಾರಿಂದಲಾದರೂ ಕತ್ತರಿಸಲ್ಪಟ್ಟದ್ದೇ ಆದರೆ, ಅವರ ಪಿತೃದೇವತೆಗಳನ್ನೆಲ್ಲಾ ಛೇದಿಸಿದ ಪಾಪಕ್ಕೆ ಗುರಿಯಾಗುತ್ತಾನೆ. ಅದು ಬಿಟ್ಟು ಅದನ್ನು ಪೂಜಿಸಿದರೆ ಸರ್ವದೇವತೆಗಳನ್ನೂ ಪೂಜಿಸಿದ ಪುಣ್ಯಭಾಗಿಯಾಗುತ್ತಾನೆ; ಎಂಬುದು ನಿತ್ಯಧರ್ಮ. ಅದೇ ಪವಿತ್ರವೃಕ್ಷವು ಯಜ್ಞಕ್ಕಾಗಿ ಛೇದಿಸಲ್ಪಡಬೇಕು. ಹಾಗೆ ಛೇದಿಸಲ್ಪಟ್ಟರೆ, ಅದು ಮಹತ್ ಪುಣ್ಯಕಾರ್ಯವು; ಎಂಬುದು ವಿಶೇಷ ಧರ್ಮವಾಗಿದೆ.

ಹೀಗೆ ನಿತ್ಯಪೂಜ್ಯ ಅಥವಾ ರಕ್ಷಣೀಯವಸ್ತುಗಳ ವಿಷಯಗಳಿರುವಾಗ ಪಶುವಧೆಯು ಯಾಗಬಹಿರ್ಭೂತವಾದದ್ದು ಪಾಪಹೇತು ಎಂಬುವುದು ಸಾಮಾನ್ಯ ಶಾಸ್ತ್ರದ ಅಭಿಪ್ರಾಯವು. ಯಜ್ಞದಲ್ಲಿ ಹಿಂಸಿಸುವುದು ಪುಣ್ಯ ಸಾಧಕ ಎಂಬುದು ವಿಶೇಷಶಾಸ್ತ್ರವು. ಹೀಗಿರುವಾಗ ಅನೇಕ ಪಶುಗಳು ಯಜ್ಞಪಶುವಾದರೂ, ನಿತ್ಯದಲ್ಲಿ ಅಸಂಖ್ಯಾತವಾಗಿ, ಆಹಾರಕ್ಕೋಸ್ಕರ ಕಟುಕರಿಂದ ಕೊಲ್ಲಲ್ಪಟ್ಟು ವಿಕ್ರೀತವಾಗಿ, ತಿನ್ನುವಂತಹುದಾಗಿವೆ. ಹೀಗೆ ಕೊಲೆಗೊಳಗಾದ ಪಶುವಿಗೆ, ವಿಶೇಷಗತಿ ಇರುವುದಿಲ್ಲ. ಅದೇ ಪಶು, ಶಾಸ್ತ್ರವಿಧಿಗೆ ಒಳಪಟ್ಟು, ಯಜ್ಞಪಶುವಾಗಿ, ಪರಮಾತ್ಮನಿಗೆ ಅರ್ಪಿತವಾದರೆ ಉತ್ತಮಗತಿಹೊಂದುತ್ತದೆ, ಎಂದು ಶಾಸ್ತ್ರದಲ್ಲಿ ನಿಗದಿಯಾಗಿದೆ. ಈ ಸುಯೋಗ ಲಭಿಸುವಾಗ. ಅದನ್ನು ತಪ್ಪಿಸಿ, ಕಟುಕರವನಿಂದ ಕೊಲೆ ಆಗುವಂತೆ ಏರ್ಪಡಿಸಿದರೆ, ಆ ಪಶುವಿಗೆ ಉಪಕಾರ ಆಗುತ್ತದಯೇ? ಈ ಕಾರ್ಯೋನ್ಮುಖನು ಪಶುವಿನಲ್ಲಿ ದಯೆಯಿಂದ ವರ್ತಿಸುತ್ತಾನೆ ಎಂದಾಗುತ್ತದೆಯೇ? ಎಂದು ಪ್ರಶ್ನಿಸಬೇಕಾಗುತ್ತದೆ. ಇದಕ್ಕೆ ಆತಂಕತರದೆ ಸಹಕರಿಸಿದರೆ ಪಶುವಿಗೆ ಉಪಕಾರವಾಗುವುದಿಲ್ಲವೇ? ವಾಚಕರೇ ವಿಮರ್ಶಿಸಬೇಕು.

ಇನ್ನು 'ಇಲ್ಲಿ ವಧಿಸಲ್ಪಟ್ಟ, ಪಶುವಿಗೆ, ಉತ್ತಮ ಫಲ ಸಿಗುತ್ತದೆ' ಎಂಬುದಾದರೂ ಅದೃಷ್ಟಫಲವಲ್ಲವೇ? ಇದನ್ನು ನಂಬುವುದಾದರೂ ಹೇಗೆ? ಎಂದು ಪ್ರಶ್ನಿಸಬಹುದು. ಅದೃಷ್ಟಫಲ ಎಂದರೆ ಏನು? ಎಂದು ಸ್ವಲ್ಪ ವಿಚಾರಮಾಡುವುದು ಅಗತ್ಯ. ಜನಸಾಮಾನ್ಯರಿಗೆ ಅದೃಷ್ಟ ಆದಾಗ್ಯೂ, ಅಂತಃಕರಣಶುದ್ಧರಾದ ಮಹಾತ್ಮರಿಗೆ ದೃಷ್ಟವಾದದ್ದೇ ಆಗಿರುವುದರಿಂದ ಈ ಯಜ್ಞಕ್ಕೇ ಈ ಫಲವು, ಎಂದು ಸಿದ್ಧಾಂತಮಾಡಲು ಸಾಧ್ಯವಾಗಿದೆ. ಇದಕ್ಕೆ ಸಾಕಷ್ಟು ಪ್ರಮಾಣ, ಪುರಾಣಗಳಲ್ಲಿ ದೊರೆಯುತ್ತವೆ. ಅಂತಃಕರಣ ಶುದ್ಧರಾದ ಮಹಾತ್ಮರುಗಳಿಗೆ ಆ ರೀತಿಯ ವಿಸ್ತೃತಜ್ಞಾನವಿರುತ್ತದೆ ಎಂಬುದಕ್ಕೆ ಇತ್ತೀಚಿನ ಒಂದೆರಡು ಉದಾಹರಣೆ ಏನೆಂದರೆ–

ಬುದ್ಧನು ವಿವಾಹಯೋಗ್ಯವಯಸ್ಸಿನ ಕನ್ಯೆಗಳಿಗೆ ಬಹುಮಾನ ಹಂಚುತ್ತಿದ್ದ ಸಂದರ್ಭದ ಅಂತ್ಯದಲ್ಲಿ ಯಶೋಧರಾ ಬಂದು ನಿಂತಳಂತೆ.

ಆಗ ಬುದ್ಧನು 'ಏನು ಯಶೋಧರಾ ಜ್ಞಾಪಕವಿದೆಯೇ' ಎಂದು ಕೇಳಿದನಂತೆ, ಅದಕ್ಕೆ 'ಜ್ಞಾಪಕವಿದೆ ಸುಮಾರು 300–400 ವರ್ಷಗಳ ಹಿಂದೆ ನಮ್ಮಿಬ್ಬರ ಸಮಾಗಮ ಆಗಿತ್ತು' ಎಂದು ಯಶೋಧರಾ ಉತ್ತರಿಸಿದಳಂತೆ. ಪುನಃ ಬುದ್ಧನು ಆಕೆಯನ್ನು ಕುರಿತು 'ಈಗ ನನ್ನನ್ನು ವಿವಾಹವಾದರೆ ತುಂಬಾ ಕಷ್ಟ ಅನುಭವಿಸಬೇಕಾಗುವುದು' ಎಂದು ತಿಳಿಸಿದನಂತೆ. ಅದಕ್ಕೆ ಯಶೋಧರೆಯು 'ನೀನು ನನ್ನನ್ನು ವಿವಾಹವಾಗ.ವುದು ಒಂದು ಆದರೆ, ಎಲ್ಲ ಕಷ್ಟಗಳಿಗೂ ಸಿದ್ಧಳಾಗಿದ್ದೇನೆ' ಎಂದು ತಿಳಿಸಿದಳಂತೆ. ಹೀಗೆಯೇ ಶ್ರೀರಾಮಕೃಷ್ಣಪರಮಹಂಸರು, ತಮ್ಮ ಶಿಷ್ಯರ ಪೈಕಿ ಕೆಲವರು ತ್ರೇತಾಯುಗ ಮತ್ತು ದ್ವಾಪರಯುಗದ ಗೆಳೆಯರೆಂದು ತಿಳಿಸಿದ್ದಾರೆ. ಶ್ರೀಜಗದ್ಗುರು ಚಂದ್ರಶೇಖರ ಭಾರತೀಸ್ವಾಮಿಗಳು. ಎಷ್ಟೋ ದೂರದಲ್ಲಿ ಪೂರ್ಣಪ್ರವಾಹದಲ್ಲಿ ಕೊಚ್ಚಿಹೋದ ಒಬ್ಬ ಗರ್ಭಿಣೀಸ್ತ್ರೀ ವಿಚಾರವನ್ನು ತಮ್ಮ ಕೊಠಡಿಯಲ್ಲೇ ಕೂತು ತಿಳಿಸಿದರೆಂದು ತಿಳಿದುಬರುತ್ತದೆ. ಅದರಿಂದ ಅದೃಷ್ಟಫಲ ಎನ್ನುವುದು ಜನಸಾಮಾನ್ಯರ ದೃಷ್ಟಿಯಿಂದ, ಎಂದು ತಿಳಿಯತಕ್ಕದ್ದು.

ಕೊನೆಯದಾಗಿ ಒಂದು ವಿಷಯವನ್ನು ತಿಳಿಸುವುದು ಅಗತ್ಯವಾಗಿದೆ. ಅಂದರೆ ಜಗತ್ತಿನಲ್ಲಿ ನಡೆಯುವ ಸರ್ವವ್ಯಾಪಾರಗಳಲ್ಲಿ 'ಕ್ಷೇತ್ರ' ಮತ್ತು 'ಕ್ಷೇತ್ರಜ್ಞ' ಹಾಸುಹೊಕ್ಕಾಗಿ ಸಿದ್ಧವಿವೆ. ಇನ್ನು ಮನುಷ್ಯಪ್ರಯತ್ನದಿಂದ ಜರುಗುವ ಸರ್ವಕಾರ್ಯಗಳಲ್ಲಿ ಮಾನವಾಂಶ, ಕ್ಷೇತ್ರಾಂಶ ಮತ್ತು ಕ್ಷೇತ್ರಜ್ಞಾಂಶ, ಈ ಮೂರು ಮೇಲಿನಂತೆ ಸಿದ್ಧವಿವೆ. ಇಲ್ಲದಿದ್ದರೆ, ಮಾನವಪ್ರಯತ್ನ ಉತ್ಕೃಷ್ಟವಾಗಿರಬಹುದು, ಉತ್ಕೃಷ್ಟಕ್ಷೇತ್ರವನ್ನೂ ಎಲ್ಲ ರೀತಿಯಿಂದ ಸಿದ್ಧಮಾಡಿಕೊಂಡಿರಬಹುದು, ಆದರೆ ಕ್ಷೇತ್ರಜ್ಞನ ಕೃಪೆ ಸಿದ್ಧವಾಗದಿದ್ದರೆ, ಎಲ್ಲವೂ ವ್ಯರ್ಥವಾಗಿ ದುಃಖವೇ ಆಗುವುದು. ಹೇಗೆಂದರೆ ರೈತ ಉತ್ಕೃಷ್ಟಭೂಮಿ ಹೊಂದಿ, ಚೆನ್ನಾಗಿ ಉತ್ತು, ಉತ್ತಮಗೊಬ್ಬರ ಹಾಕಿ, ಶ್ರೇಷ್ಠಧಾನ್ಯ ಬಿತ್ತಿ, ಭಾರೀ ಜಲಾಶಯಗಳಿಂದ ಕಾಲುವೆಯನ್ನು ಹೊಂದಿರಬಹುದು. ಇವೆಲ್ಲಾ ಮನುಷ್ಯಪ್ರಯತ್ನದಿಂದ ಸಾಧ್ಯ. ಆದರೆ ಮಳೆ ಸಕಾಲದಲ್ಲಿ ಬರದೇ ಇದ್ದರೆ, ಜಲಾಶಯ ಬರಿದಾಗಿ ಪೈರು ನಷ್ಟವಾಗುತ್ತದೆ. ಅಥವಾ ಅತಿವೃಷ್ಟಿಯಾಗಿ ಪೈರೆಲ್ಲಾ ನಾಶವಾಗಬಹುದು. ಇದು ಸಾಕಷ್ಟು ಅನುಭವದಲ್ಲಿರುವ ವಿಷಯ. ಹೀಗೆಯೇ–

ಹಿಟ್ಲರನ ಕಾಲಕ್ಕೆ ಜರ್ಮನಿ 'ವಿ$_2$' ಅಸ್ತ್ರವನ್ನು ಸಿದ್ಧಮಾಡಿತು. 'ಆಟಂಬಾಂಬನ್ನು' ಸಿದ್ಧಮಾಡಿತು. ಇಲ್ಲಿಗೆ ಪುರುಷಪ್ರಯತ್ನ ಮತ್ತು ಕ್ಷೇತ್ರಸಿದ್ಧಿ ಲಭಿಸಿತು. ಆದರೆ ಕ್ಷೇತ್ರಜ್ಞನ ಕೃಪೆ ಸಿದ್ಧಿಸಲಿಲ್ಲ. ಜರ್ಮನಿ ತನ್ನ 'ವಿ$_2$' ಅಸ್ತ್ರದಿಂದ ಇಂಗ್ಲೆಂಡನ್ನು ನಡುಗಿಸಿತು. ಆದೇಕಾಲಕ್ಕೆ ಇಂಗ್ಲೆಂಡಿನ ಪೋಪ್ ಒಬ್ಬನು ಭಗವಂತನಲ್ಲಿ ಮೊರೆಯಿಟ್ಟ. 'ವಿ' ಬೀಜಾಕ್ಷರವನ್ನು ಇಡೀ ಇಂಗ್ಲೆಂಡ್ ಮತ್ತು ತದಾಶ್ರಿತ ದೇಶದ ಎಲ್ಲ ಜನರೂ ಉಚ್ಚರಿಸಬೇಕೆಂದು ರಾಜಶಾಸನದ ಮೂಲಕ ಜಾರಿಗೆ ತಂದ. ಈ ಬೀಜಾಕ್ಷರವನ್ನು ಸಾರ್ವತ್ರಿಕವಾಗಿ ರಾರಾಜಿಸುವಂತೆ ಏರ್ಪಡಿಸಿದ. ಇದೇ ಜರ್ಮನಿಯ ಒಬ್ಬ ವಿಜ್ಞಾನಿ, ಇಂಗ್ಲೆಂಡಿನಲ್ಲಿ ಯುದ್ಧಖೈದಿಯಾಗಿ ಸಿಕ್ಕಿಬಿದ್ದ. ಅವನಿಂದಲೇ ಇಂಗ್ಲೆಂಡ್ ಈ ಅಸ್ತ್ರದಿಂದ ಮುಕ್ತವಾಯಿತು. ಚರ್ಚಿಲ್ಲರೇ ಇದನ್ನು, ತಾವು ದೈವೀಸಹಾಯದಿಂದ ಪಾರಾದೆವೆಂದು ತಿಳಿಸಿದ್ದಾರೆ.

ಹಾಗೇ ಜರ್ಮನಿ ಆಟಂಬಾಂಬ್ ಸಿದ್ಧಮಾಡಿತು. ಅದೇ ಜರ್ಮನಿ ಈನ್‌ಸ್ಟೀನನನ್ನು ದೇಶದಿಂದ ಹೊರದೂಡಿ ಅಮೆರಿಕಾ ದೇಶಕ್ಕೆ ಋಣಿಯನ್ನಾಗಿ ಮಾಡಿತು. ತನ್ಮೂಲಕ ಜರ್ಮನಿ ಸ್ವನಾಶವನ್ನು ಸಿದ್ಧಮಾಡಿಕೊಂಡಿತು. ಇದರಿಂದ ಮಾನವನು ಅರಿಯಬೇಕಾದ್ದು ಏನೆಂದರೆ ಕೇವಲ ಮನುಷ್ಯ ಪ್ರಯತ್ನ ಮತ್ತು ಕ್ಷೇತ್ರಸಿದ್ಧತೆ ಅಷ್ಟರಿಂದಲೇ ಕಾರ್ಯಸಾಧನೆ ಸಾಧ್ಯವಿಲ್ಲ. ಕ್ಷೇತ್ರಜ್ಞನ ಕೃಪೆಯೂ ಅಗತ್ಯ. ಅದೊಂದಿದ್ದರೆ, ಮನುಷ್ಯ ಪ್ರಯತ್ನ ಮತ್ತು ಕ್ಷೇತ್ರಸಿದ್ಧತೆ ಸಿದ್ಧವಿಲ್ಲದಿದ್ದರೂ, ಎಲ್ಲಿಂದಲೋ ಒದಗಿ, ಸಿದ್ಧಿ ಉಂಟಾದೀತು, ಎಂಬುದು ವ್ಯಕ್ತವಾಗುವುದು.

ಈ ಅಂಶವನ್ನು ಪೂರ್ಣ ಅರಿತು. ನಮ್ಮ ಪೂರ್ವಜರು 'ಕ್ಷೇತ್ರಜ್ಞಪರ' ವೈಜ್ಞಾನಿಕ ಪ್ರಾಯೋಗಿಕ ಕ್ರಮವನ್ನು, ವಿಶ್ವದ ಅಭ್ಯುದಯಕ್ಕಾಗಿ, 'ವೇದ' ಸಾಹಿತ್ಯದ ಮೂಲಕ, ನಮಗೆ ಒದಗಿಸಿಕೊಟ್ಟಿದ್ದಾರೆ. ಇದನ್ನು ಭಾರತೀಯರು ಮನಗಂಡಲ್ಲಿ ನನ್ನ ಲೇಖನಗಳ ಶ್ರಮವು ಸಾರ್ಥಕವಾದೀತು.

ಎ. ಎಸ್. ಸುಬ್ರಹ್ಮಣ್ಯಶಾಸ್ತ್ರೀ.

ವೇದಸಾಹಿತ್ಯದ ಸ್ವರೂಪ

ವೇದದ ಸ್ವರೂಪವನ್ನು ತಿಳಿಯಬೇಕಾದರೆ ವರ್ಣಗಳು ಎಂದರೇನು ? ಸ್ವರಗಳು ಎಂದರೇನು? ಇವುಗಳ ಅಗತ್ಯವೇನು? ಎಂಬುದನ್ನು ತಿಳಿಯಬೇಕು. ಇವುಗಳನ್ನು ಸರಿಯಾಗಿ ತಿಳಿದರೆ 'ವೇದಸಾಹಿತ್ಯ'ದ ಮತ್ತು ಇಡೀ 'ವಿಶ್ವದ' ಪರಸ್ಪರ ಸಂಬಂಧವನ್ನು ಅರಿಯಬಹುದು.

'ವರ್ಣ' ಮತ್ತು 'ಸ್ವರ'ಗಳ ವಿಮರ್ಶೆಗೆ ಮುನ್ನ 'ವಿಶ್ವವಿಮರ್ಶೆ' ಮಾಡುವುದು ಉಚಿತವು.

ವಿಶ್ವರೂಪ :-

'ಬಿಂದು','ಸ್ಪಂದನ'ಮತ್ತು 'ತರಂಗಾ'ತ್ಮಕವು ಈ ವಿಶ್ವವು.'ಪ್ರಕೃತಿ' ಮತ್ತು 'ಪುರುಷರ' ಮಿಲನವೇ ವಿಶ್ವಾರಂಭವು. 'ಪ್ರಕೃತಿ' ಮತ್ತು 'ಪುರುಷ'ರು ಏಕಮೂಲಜನ್ಯರು. ಈ ಏಕಮೂಲವು 'ಬ್ರಹ್ಮ' ಪದನಿರ್ದಿಷ್ಟ ನಿತ್ಯವಸ್ತುವಾಗಿದೆ. ಇವುಗಳ ಪೈಕಿ 'ಪುರುಷ' ಚೈತನ್ಯ ಪೂರ್ಣವು. 'ಪ್ರಕೃತಿ' ಜಡವು, 'ಚೈತನ್ಯ'ವು ಪ್ರಪ್ರಥಮವಾಗಿ 'ಸ್ಪಂದನ ತರಂಗ' ರೂಪದಲ್ಲಿ ವ್ಯಕ್ತವಾಗುವುದು. ಈ ಶಕ್ತಿಗರ್ಭಿತ 'ಬ್ರಹ್ಮ' ವಸ್ತುವು 'ಬಿಂದು' ರೂಪವನ್ನು ತಾಳುತ್ತದೆ. ಈ 'ಬಿಂದು'ವು ಸೃಷ್ಟಿಕಾರ್ಯಕ್ಕಾಗಿ 'ಪ್ರಕೃತಿ' ಯನ್ನು ಆಶ್ರಯಿಸುತ್ತದೆ. ಚೈತನ್ಯಪೂರ್ಣ 'ಬಿಂದು'ವು ಜಡಪ್ರಕೃತಿಯನ್ನು ಆಶ್ರಯಿಸಿ ಸ್ಪಂದನಗೊಳ್ಳುತ್ತಾ, ತನ್ನ 'ಸ್ಪಂದನಗುಣ'ವನ್ನು 'ಧ್ರುವ' 'ಪ್ರಕೃತಿ' ಯಲ್ಲೂ ಉಂಟುಮಾಡುತ್ತದೆ. ಇದಕ್ಕೆ ಆಧಾರ :-

"ಪರಮೇಶ್ವರಃ ಸ್ವಾಂಗಭೂತನಿಖಿಲಪ್ರಪಂಚವಿಲಯಾತ್ಮಕ ಶಕ್ತಿಮನುಪ್ರವಿಶ್ಯ ಬಿಂದುಭಾವಮಯತೇ ||"

"ಏತೇನ ಪರಮಶಿವಸ್ಯ ಪ್ರಥಮಸ್ಫೂರ್ತಿರೂಪಾ ಯಾ ಶಕ್ತ್ಯವಸ್ಥಾ ಸೈವ ಪ್ರಥಮೋ ಬಿಂದುರಿತ್ಯಾಪತತಿ" || ತತ್ವಚಿಂತಾಮಣಿ.

"ಅಕ್ಷಯಂ ನಾನ್ಯದಾಧಾರಂ ಅಮೇಯಮಜರಂ 'ಧ್ರುವಂ' (ಧ್ರುವಂ=ಸ್ಪಂದನರಹಿತಂ ಇತಿ ಟೀಕಾ) ವಿಷ್ಣುಪುರಾಣಂ.

"ಪರಶಿವಃ ಪ್ರಕಾಶಸ್ವರೂಪಃ, ಲೀಲಾವಶಾತ್ ಪರಶಿವಸ್ಯ ಜಾತಾಯಾಂ ಸಿಸೃಕ್ಷಾಯಾಂ ಪರಾಪ್ರಕೃತಿರಪಿ ವಿಮರ್ಶರೂಪೇಣ ಪರಿಸ್ಫುರತಿ" ಇತಿ ರಾಘವಭಟ್ಟಃ

ನಾದೋತ್ಪತ್ತಿ :-

ಬಿಂದುವು ಪ್ರಕೃತಿಯನ್ನು ಆಶ್ರಯಿಸಿ ತನ್ನ ಸ್ಪಂದನವನ್ನು ಅದರಲ್ಲೂ ಉಂಟುಮಾಡುವುದರ ಫಲವಾಗಿ ನಾದವು ಉದ್ಭವಿಸಿತು. ಆಧಾರ :–

ಭಿದ್ಯಮಾನಾತ್ ಪರಾದ್ಬಿಂದೋಃ ಅವ್ಯಕ್ತಾತ್ಮಾ ರವೋಽಭವತ್ ।
ಶಬ್ದಬ್ರಹ್ಮೇತಿ ತಂ ಪ್ರಾಹುಃ ಸರ್ವಾಗಮವಿಶಾರದಾಃ ॥

"ಟೀಕಾ ;– ಪರಾದ್ಬಿಂದೋರಿತ್ಯನೇನ ಶಕ್ತ್ಯವಸ್ಥಾರೂಪೋ ಯಃ ಪ್ರಥಮೋ ಬಿಂದುಃ" ॥

ಅಂದರೆ ನಾದವೇ ಅಥವಾ ಸ್ಪಂದನತರಂಗವೇ 'ಸೃಷ್ಟಿ', 'ಸ್ಥಿತಿ', ಮತ್ತು 'ಲಯ' ಮೂಲವು, ಎಂಬುದು ಸಿದ್ಧವಾಗುತ್ತದೆ. 'ಬಿಂದು'ವಿಗೆ 'ಕ್ಷೇತ್ರಜ್ಞ'ನೆಂದೂ 'ಪ್ರಕೃತಿ'ಗೆ 'ಕ್ಷೇತ್ರ'ವೆಂದೂ ಪರ್ಯಾಯ ಪದಗಳುಂಟು.

ಪ್ರಕೃತಿಯ ಗುಣಗಳು :-

'ಪ್ರಕೃತಿ'ಯು 'ಸತ್ವ' 'ರಜಸ್ಸು' ಮತ್ತು 'ತಮಸ್ಸು' ಎಂಬ ಮೂರು ಗುಣಗಳ ಮೂಲಕ ವ್ಯಕ್ತವಾಗುತ್ತದೆ.

ಸತ್ವಗುಣ :–

'ಬಿಂದು'ವು 'ಪ್ರಕೃತಿ'ಯಲ್ಲಿ ಆಮೂಲಾಗ್ರನಾಗಿ ವ್ಯಾಪಿಸುವುದಕ್ಕೆ 'ಪ್ರಕೃತಿ'ಯು ಯಾವ ಆತಂಕವನ್ನೂ ಮಾಡುವುದಿಲ್ಲ. ತನ್ನಲ್ಲಿ ಸರ್ವ ವ್ಯಾಪಕತ್ವಕ್ಕೆ ಅವಕಾಶ ಕೊಡುತ್ತದೆ. ಅಲ್ಲದೆ 'ಬಿಂದು'ವಿನ ಸ್ಪಂದನದೊಂದಿಗೆ ತಾನೂ ಸಮನಾಗಿ ಸ್ಪಂದಿಸುತ್ತದೆ. ಅಂದರೆ 'ಬಿಂದು'ವಿಗೆ

'ಪ್ರಕೃತಿ'ಯು ಪೂರ್ಣವಾಗಿ ಶರಣಾಗತವಾಗುತ್ತದೆ. 'ಶಕ್ತಿ' ಮತ್ತು 'ಪುರುಷ' 'ಪ್ರಕೃತಿ'ಗಳು ಏಕತ್ವ ಹೊಂದುವಂತೆ 'ಪ್ರಕೃತಿ' ಸಹಕರಿಸುತ್ತದೆ. 'ಪ್ರಕೃತಿ'ಯ ಈ ಗುಣಕ್ಕೆ 'ಸತ್ವ'ಗುಣ ಎಂದು ಹೆಸರು. 'ಕ್ಷೇತ್ರಜ್ಞ'ನು ಪೂರ್ಣ ಸ್ವಾಮಿತ್ವ, ಸರ್ವಜ್ಞತ್ವ (ಅಂದರೆ ಪ್ರಕೃತಿಯನ್ನು ಪೂರ್ಣ ತಿಳಿದಮೇಲೆ ಅದರಿಂದ ಮುಂದೆ ಏನೇನು ಸಾಧಿಸಲು ಬರುತ್ತದೆ; ಎಂಬ ಎಲ್ಲ ಜ್ಞಾನವು) ಮತ್ತು 'ಸರ್ವಕ್ರಿಯಾಶಕ್ತಿತ್ವ' ('ಪ್ರಕೃತಿಯು ಪೂರ್ಣಶರಣಾದುದರಿಂದ) ವನ್ನೂ ವ್ಯಕ್ತಪಡಿಸಲು ಉದ್ಯುಕ್ತನಾಗುತ್ತಾನೆ. ಆಧಾರ :–

"ತನ್ಮಧ್ಯೇ ಕಾರಣಭೂತ'ಸತ್ವಾಂಶ' ಪ್ರತಿಬಿಂಬಿತೋ ಯಶ್ಚಿದಾಭಾಸಃ ಸೋಽಹಮಿತಿ ಸ್ಥಿರಾಧ್ಯಾಸಾತ್ 'ಈಶ್ವರ' ಇತ್ಯುಚ್ಯತೇ, ತಸ್ಯ ಸತ್ವಗುಣೋಪಾಧಿತ್ವಾತ್ 'ಸರ್ವಜ್ಞತ್ವಂ', 'ಸರ್ವೇಶ್ವರತ್ವಂ' 'ಸರ್ವಕಾರ್ಯಕರ್ತೃತ್ವಂ' ಚ॥" ಈ ಗುಣವು 'ಸ್ಪಂದನ ಮತ್ತು ತರಂಗ' ಮಾನಕಾರಕವು.

ಈ ರೀತಿಯಲ್ಲಿ ಏಕತ್ವದಿಂದ ಏಕಮೇವಾದ್ವಿತೀಯವಾದ ಯಾವ ಶಕ್ತ್ಯವಸ್ಥಾ 'ಬಿಂದು' ಅಥವಾ 'ಕ್ಷೇತ್ರಜ್ಞ'ಉಂಟೋ ಅವನು 'ಬಹುಸ್ಯಾಂ' ಎಂಬ ಸಂಕಲ್ಪಮಾಡುತ್ತಾನೆ. ಮತ್ತು ವಿವಿಧ ಸೃಷ್ಟ್ಯಪೇಕ್ಷ್ಯಾ ಭಿನ್ನತೆಯನ್ನು ಸ್ವೀಕರಿಸಿ ಒಂದೇ 'ಪ್ರಕೃತಿ' ಅಥವಾ 'ಕ್ಷೇತ್ರ'ದಲ್ಲಿ, ಅನಂತ 'ಬಿಂದು'ಗಳಾಗಿ ಅಥವಾ 'ಕ್ಷೇತ್ರಜ್ಞ'ರಾಗಿ ವ್ಯಕ್ತನಾಗುತ್ತಾನೆ ಇದಕ್ಕೆ ಆಧಾರ :–

"ತದೇಕಂ ಬಹೂನಾಂ ಕ್ಷೇತ್ರಜ್ಞಾನಾಂ ಸಮುದ್ರ ಇವ ಔದಕಾನಾಂ ಭಾವನಾಂ"—(ಸುಶ್ರುತ)

ಅಂದರೆ ಒಂದು ಸಮುದ್ರದಲ್ಲಿ ಅಸಂಖ್ಯಾತ ಜಲಚರಗಳು ಆಶ್ರಯ ಹೊಂದಿರುವಂತೆ.

ರಜೋಗುಣ :–

ಒಬ್ಬ 'ಕ್ಷೇತ್ರಜ್ಞ'ನು ಅಸಂಖ್ಯಾತ'ಕ್ಷೇತ್ರಜ್ಞ'ನಾಗಲು 'ಪ್ರಕೃತಿ'ಯ 'ಸತ್ವ'ಗುಣಕ್ಕೆ ಭಂಗ ಉಂಟಾಗುತ್ತದೆ. 'ಪ್ರಕೃತಿ'ಯು ಅದರ ಸ್ವರೂಪ

ವನ್ನು ಪೂರ್ತಿಯಾಗಿ ತ್ಯಜಿಸುತ್ತದೆ. ಈ ಭಂಗವು ಮೂರು ವಿಧವಾಗಿ ಉಂಟಾಗುತ್ತದೆ. ೧) ಏಕವಿಧಸ್ಪಂದನಕ್ಕೆ ೨) 'ಸ್ಪಂದನದ ಅಖಂಡತ್ವಕ್ಕೆ' ಮತ್ತು ೩) ಏಕೈಕವ್ಯಕ್ತಿತ್ವಕ್ಕೆ.

ಈ ರೀತಿ ಏಕವಿಧ 'ಸ್ಪಂದನ' ಮತ್ತು 'ಅಖಂಡ' ಸ್ಪಂದನವು ಭಂಗಹೊಂದಿ ವಿವಿಧ ಸಖಂಡಸ್ಪಂದನಗಳು 'ಪ್ರಕೃತಿ'ಯಲ್ಲಿ ವ್ಯಕ್ತವಾಗುತ್ತವೆ. ಈ ರೀತಿ ಬದಲಾಗುವಂತೆ ಅವಕಾಶ ಉಂಟುಮಾಡಿಕೊಡುವ ಗುಣವೇ 'ರಜೋ' ಗುಣವು. ಇದು ಕಾಲಮಾನಕಾರಕವು.

ತಮೋಗುಣ :–

ವಿವಿಧಸ್ಪಂದನತರಂಗಗಳು 'ಪ್ರಕೃತಿ' ಯಲ್ಲಿ ಉದಯವಾಗಿ ಸ್ಪಂದನದ ಅಖಂಡತ್ವಕ್ಕೆ ಚ್ಯುತಿಯಾಯಿತು. ವಿವಿಧಸ್ಪಂದನತರಂಗಗಳ ಸರ್ವವ್ಯಾಪಿತ್ವಕ್ಕೆ ಆತಂಕ ಉಂಟಾಯಿತು. ಇವುಗಳ ವ್ಯಾಪಕತ್ವವನ್ನು ಮಿತಿಯಲ್ಲಿರಿಸಬೇಕಾಯಿತು. ಈ ರೀತಿ ಮಿತಿನಿಯಮ ಮಾಡುವ ಗುಣವೇ 'ತಮೋ' ಗುಣವು. ಅಂದರೆ ಆತಂಕ ಉಂಟುಮಾಡುವ ಗುಣ 'ತಮೋ' ಗುಣ. ಇದು ದೇಶಮಾನಕಾರಕವು.

ರಜಸ್ಸು ಮತ್ತು ತಮಸ್ಸು ಒಟ್ಟುಗೂಡಿ ವ್ಯಕ್ತಿಮಾನಕಾರಕವು.

ಭಿನ್ನವ್ಯಕ್ತಿ :–

'ಸ್ಪಂದನ'ಗಳ ವೈವಿಧ್ಯತೆ ಮತ್ತು 'ಸ್ಪಂದನ'ಗಳ ವ್ಯಾಪಕತೆಯ ನಿಯಮನ, ಇವೆರಡೂ ಸಿದ್ಧವಾಗಿ ಏಕವ್ಯಕ್ತಿತ್ವಕ್ಕೆ ಚ್ಯುತಿ ಬಂದು ಬಹು-ವ್ಯಕ್ತಿತ್ವವು ಪ್ರಕೃತಿಯಲ್ಲಿ ವ್ಯಕ್ತವಾಗುತ್ತದೆ. ಅಂದರೆ, 'ಕ್ಷೇತ್ರಜ್ಞ'ನಿಂದ ಪ್ರಕೃತಿಯ 'ರಜೋ'ಗುಣ ಮತ್ತು 'ತಮೋ'ಗುಣಗಳು ಪ್ರಕಟ-ವಾಗಿ ಈ 'ರಜೋ'ಗುಣ ಮತ್ತು 'ತಮೋ'ಗುಣಗಳ ನಿಮಿತ್ತವಾಗಿ 'ಭಿನ್ನಭಿನ್ನವ್ಯಕ್ತಿ'ಗಳು ಸಿದ್ಧವಾಗುತ್ತವೆ. ತತ್ಫಲವಾಗಿ 'ಕ್ಷೇತ್ರಜ್ಞ'ನಿಗೆ 'ಭಿನ್ನಕಾಲ', 'ಭಿನ್ನದೇಶ' ಮತ್ತು 'ಭಿನ್ನವ್ಯಕ್ತಿ' ಎಂಬ ಮೂರು 'ಆವರಣ'ಗಳು ಅಥವಾ ಮಾನಗಳು 'ಪ್ರಕೃತಿ'ಯಿಂದ ಸಿದ್ಧವಾಗುತ್ತವೆ.

ಇದಕ್ಕೆ ಆಧಾರ :—

ಮೂಲ:- "ರಜಸ್ತಮೋಭ್ಯಾಂ ಉಪಹಿತಸ್ಯ ಜೀವಸಂಜ್ಞಾ"

ಟೀಕಾ : - ಸತ್ವಗುಣಪ್ರಧಾನ – ಕಾರಣರೂಪಮಾಯಾಯಾಃ ಕಾರ್ಯಭೂತರಜಸ್ತಮೋಂಶೋಪಾಧಿತಃ ಪ್ರತಿಬಿಂಬಿತೋ ಯತ್ ಚಿದಾಭಾಸಃ ಸ ಯದಾ ಕರ್ಮನಿಮಿತ್ತವಶಾತ್ ದೇಶಕಾಲವಸ್ತುತ್ರಿವಿಧಪರಿಚ್ಛೇದಂ ಗೃಹೀತ್ವಾ ಸ್ವರೂಪಂ ಪೂರ್ಣಂ ವಿಹಾಯ ಸ್ವಜಾತೀಯವಿಜಾತೀಯಸ್ವಗತಭೇದಂ ಪ್ರಾಪ್ಯ ಅಹಂ ಮಮೇತ್ಯಧ್ಯಾಸೋ ಭವತಿ ತದಾ ಜೀವ ಇತ್ಯುಚ್ಯತೇ | ಅಸ್ಯ ಕಾರ್ಯೋಪಾಧಿತ್ವಾಜ್ಜಾಡ್ಯಂ ||

ಮೇಲಿನ ಆಧಾರಗಳನ್ನು ಗಮನಿಸಿದ್ದೇ ಆದರೆ ಸೃಷ್ಟಿಪೂರ್ವದಿಂದಲೂ 'ಶಕ್ತಿ' ಯೇ (ಬಿಂದು) ಬೇರೆ 'ವಸ್ತು'ವೇ(ಪ್ರಕೃತಿಯೇ)ಬೇರೆ ಎಂಬುದು ಸ್ಪಷ್ಟಪಡುತ್ತದೆ. ಇವು ಒಂದಕ್ಕೊಂದು ವಿಪರೀತ ಗುಣವುಳ್ಳವು. ಒಂದು ಆಶ್ರಯಿ, ಮತ್ತೊಂದು ಆಶ್ರಯ. ಇವೆರಡರ ಒಕ್ಕೂಟ ಸೃಷ್ಟಿಪದಾರ್ಥಗಳು. ವಿಶ್ವದಲ್ಲಿ ಒಂದನ್ನು ಮತ್ತೊಂದಾಗಿ ಪರಿವರ್ತಿಸಲು ಸಾಧ್ಯವಿಲ್ಲ. ವಿಶ್ವದಲ್ಲಿ ಒಂದನ್ನು ಮತ್ತೊಂದರಿಂದ ಬೇರ್ಪಡಿಸಲೂ ಸಾಧ್ಯವಿಲ್ಲ. 'ಪ್ರಕೃತಿ'ರಹಿತ ಶುದ್ಧ 'ಶಕ್ತಿ' ಯಾವ ಕಾರ್ಯವನ್ನೂ ಮಾಡಲಾರದು ಎಂಬುವುದು ಸ್ಪಷ್ಟವಾಗುತ್ತದೆ. ಸತ್ಯಾಂಶವು ಈ ರೀತಿಯಲ್ಲಿರುವಾಗ "ವಸ್ತುವನ್ನು ನಾಶಗೊಳಿಸಿ ವಸ್ತುಹೀನಶುದ್ಧಶಕ್ತಿಯನ್ನಾಗಿ, ವಸ್ತುವನ್ನು ಪರಿವರ್ತಿಸಿದ್ದೇವೆ" ಎಂಬ ಪಾಶ್ಚಾತ್ಯ ಆಧುನಿಕ ವಿಜ್ಞಾನಿಗಳ ಘೋಷಣೆ, ಸತ್ಯವೇ ಎಂದು ಪ್ರಶ್ನಿಸಬೇಕಾಗುತ್ತದೆ.

ವಸ್ತುವಿನ ಐದನೇಮಾನ :–

ಅಲ್ಲದೆ ಪ್ರತಿವಸ್ತುವಿಗೆ 'ಕಾಲಮಾನ', 'ದೇಶಮಾನ' ಮತ್ತು 'ವ್ಯಕ್ತಿಮಾನ' ಎಂಬ ಮೂರು ವಿಧ ಮಾನಗಳುಂಟು ಎಂಬುವುದು ಸ್ಪಷ್ಟವಾಗಿದೆ. ಪಾಶ್ಚಾತ್ಯವಿಜ್ಞಾನಿಗಳ ದೃಷ್ಟ್ಯಾ ಮೂರು ದೇಶಮಾನ ಮತ್ತು ಒಂದು ಕಾಲಮಾನ ಉಳ್ಳದ್ದು ವಸ್ತು ಎಂದು ಉಕ್ತವಾಗಿದೆ. ಪೌರ್ವಾತ್ಯ ದೃಷ್ಟ್ಯಾ ಈ ನಾಲ್ಕು ಮಾನಗಳಲ್ಲದೆ ಐದನೇ 'ವ್ಯಕ್ತಿ'ಮಾನವೂ ಉಕ್ತ

ವಾಗಿದೆ. 'ವ್ಯಕ್ತಿ'ಮಾನವಿಲ್ಲದೆ 'ಭಿನ್ನ'ವ್ಯಕ್ತಿಗಳು ಸಿದ್ಧವಾಗಲಾರವು. ಭಿನ್ನ 'ವ್ಯಕ್ತಿ'ಯೇ ಇಲ್ಲದಿದ್ದರೆ 'ಕಾಲ' ಮತ್ತು 'ದೇಶ' ಮಾನಗಳು ಅರ್ಥ ರಹಿತವಾಗುವುವು, ಅಲ್ಲದೆ ಈ ಮಾನಗಳಾದರೂ ಸಿದ್ಧವಾಗಲಾರವು. ಹೇಗೆಂದರೆ ಏಕಮೇವಾದ್ವಿತೀಯ ವ್ಯಕ್ತಿಯಾದರೆ ತುಲನಾತ್ಮಕಜನ್ಯಗಳಾದ ಕಾಲ ಮತ್ತು ದೇಶಗಳು ಅಸಾಧ್ಯಗಳಾಗುತ್ತವೆ. ಭಿನ್ನ ಭಿನ್ನ 'ವ್ಯಕ್ತಿ'ಗಳು ಸಿದ್ಧವಾಗಿರುವ ವಿಷಯವು ಎಂದ ಮೇಲೆ ಎಲ್ಲ ಮಾನಗಳಲ್ಲಿ 'ವ್ಯಕ್ತಿ' ಮಾನವು ಮುಖ್ಯವಾಗಿ ಗೋಚರಕ್ಕೆ ಬರುತ್ತದೆ. ಅಲ್ಲದೆ ಈ ಮಾನವನ್ನು ಗಣನೆಗೆ ತಂದುಕೊಂಡ ಹೊರತು 'ವಸ್ತು'ವಿನ ಪೂರ್ಣಜ್ಞಾನ ಉಂಟಾಗುವುದಿಲ್ಲ. ಈ 'ವ್ಯಕ್ತಿ' ಮಾನವನ್ನೇ ಜ್ಯೋತಿಶ್ಶಾಸ್ತ್ರದಲ್ಲಿ 'ಪದವೀಮಾನ' ಎಂದು ವಿವರಿಸಿದ್ದಾರೆ ಆಧಾರ:—

"ಪದವೀ ಪೂರ್ವಪುಣ್ಯಾನಾಂ ಲಿಖ್ಯತೇ ಜನ್ಮಪತ್ರಿಕಾ"

ಅಂದರೆ ಒಂದು 'ವ್ಯಕ್ತಿ'(ಬಿಂದು)ವ್ಯಕ್ತವಾಗುವ ಮುನ್ನ ಆ ವ್ಯಕ್ತಿ (ಬಿಂದು) ಒಂದು ವಿಶಿಷ್ಟ ಪದವಿಯನ್ನು ಸಿದ್ಧಮಾಡಿಕೊಂಡೇ ಜನ್ಮ ತಾಳುತ್ತದೆ. ಅಲ್ಲದೆ ಈ ಪದವಿಯು ಕಾರ್ಯಕಾರಣಗಳಿಂದಾಗಿ ಪ್ರತಿಕ್ಷಣದಲ್ಲಿ ವೃದ್ಧಿ ಮತ್ತು ಹ್ರಾಸಗಳನ್ನು ಅನುಭವಿಸುತ್ತಾ ಇರುತ್ತದೆ. ಈ ವ್ಯಕ್ತಿಮಾನದಿಂದಾಚೆ ಶಕ್ತಿ(ಕ್ಷೇತ್ರಜ್ಞ)ಎನ್ನುವುದು ಪೃಥಕ್ಕಾಗಿ ಸಿದ್ಧವಿರುವಂತಹುದಾಗಿದೆ

ವರ್ಣೋತ್ಪತ್ತಿ :—

'ಸತ್ವ' ಗುಣಾಶ್ರಿತ 'ಬಿಂದು' ಜನ್ಯ ತರಂಗವು ಅಖಂಡವೂ ಅವ್ಯಕ್ತವೂ ಮತ್ತು ವರ್ಣರಹಿತವೂ ಆಗಿರುತ್ತದೆ. ಇದಕ್ಕೆ ವಿವಿಧ ಸೃಷ್ಟಿಗೆ ಅವಕಾಶವಿಲ್ಲ. ಈ ಅಖಂಡನಾದವು 'ರಜಸ್ಸು' ಮತ್ತು 'ತಮಸ್ಸು'ಗಳಿಂದ ಖಂಡಿತವಾಗಿ 'ಕಾಲ' 'ದೇಶ' ಮತ್ತು 'ವ್ಯಕ್ತಿ'ಗಳೆಂಬ ಮೂರು ಮಾನಗಳು ಸಿದ್ಧವಾಗುವುದರಿಂದ ವ್ಯಕ್ತವೂ, ಸವರ್ಣವೂ ಮತ್ತು ವಿವಿಧ ಸೃಷ್ಟಿ ಸ್ಥಿತಿ ಮತ್ತು ಲಯ ಸಾಮರ್ಥ್ಯಯುಕ್ತವೂ ಆಗುತ್ತದೆ. ಇದಕ್ಕೆ ಪ್ರಮಾಣ :

"ಕ್ರಿಯಾಶಕ್ತಿ ಪ್ರಧಾನಾಯಾಃ ಶಬ್ದಶಬ್ದಾರ್ಥಕಾರಣಂ । ಪ್ರಕೃತೇಃ ಬಿಂದುರೂಪಿಣ್ಯಾಃ ಶಬ್ದಬ್ರಹ್ಮಾ ಭವತ್ ಪರಂ ॥"

ಭಿದ್ಯಮಾನಾದಿತಿ ।– ಪರಾದ್ಬಿಂದೋರಿತ್ಯನೇನ ಶಕ್ತ್ಯವಸ್ಥಾರೂಪೋ ಯಃ ಪ್ರಥಮೋ ಬಿಂದುಃ ತದವ್ಯಕ್ತಾತ್ಮಾ ವರ್ಣಾದಿವಿಶೇಷರಹಿತೋಽಖಂಡೋ ನಾದಮಾತ್ರ ಉತ್ಪನ್ನಃ॥

ಇನ್ನು ವರ್ಣಸಾಧಕ ತರಂಗಗಳು ಸಿದ್ಧವಾಗುವ ಕಾಲಕ್ಕೆ ಪ್ರಥಮವಾಗಿ 'ಓಂ' ಎಂಬ ವರ್ಣಸಾಧಕತರಂಗವು ಜನಿಸಿತು. ಇದರ ಸ್ವರೂಪವಾದರೂ 'ಅ' 'ಉ' 'ಮ' ಎಂಬ ಮೂರುವರ್ಣಗಳು ಒಟ್ಟಾಗಿ ಉಚ್ಚರಿಸಿದರೆ ಉಂಟಾಗುವ 'ಸ್ಪಂದನ ತರಂಗ' ಸಮಾನ 'ತರಂಗ'ವು. ಈ ರೀತಿಯ 'ತರಂಗ'ವು 'ಓಂ' ಎಂಬ ವರ್ಣೋಚ್ಚಾರದಿಂದ ಸಿದ್ಧವಾಗುವುದು. ಇದು

"'ಓಂ' ಇತ್ಯೇಕಾಕ್ಷರಂ ಬ್ರಹ್ಮ"

"'ಓಂ' ವೇದಶಿರಃ" ಎಂಬ ವಾಕ್ಯಗಳಿಂದ ಸ್ಪಷ್ಟವಾಗುತ್ತದೆ. ಇದೇ ಪ್ರಧಾನ ತರಂಗ. ಇದೇ ಇತರೇ ಐವತ್ತು ವಿಧ ತರಂಗಗಳ ಮೂಲ. ಅಂದರೆ 'ಅ'ಕಾರಾದಿ 'ಕ್ಷ'ಕಾರಾಂತ ಐವತ್ತು ವಿಧ ತರಂಗಗಳು, ಈ ಪ್ರಧಾನ ತರಂಗಜನ್ಯ ತರಂಗಗಳಾಗಿವೆ. ಈ ಐವತ್ತು ತರಂಗಗಳೂ ಗೌಣತರಂಗಗಳು.

ವೇದಸ್ವರೂಪ :-

ವೇದಸಾಹಿತ್ಯವಾದರೂ ಖಂಡಿತ ವ್ಯಕ್ತವರ್ಣಾತ್ಮಕ ಸ್ಪಂದನ ತರಂಗಗಳ ಸಾಹಿತ್ಯವೇ ಆಗಿದೆ. ಈ ವಿಶ್ವದಲ್ಲಿ ವಿವಿಧ ಸೃಷ್ಟಿ, ಸ್ಥಿತಿ ಮತ್ತು ಲಯ ಕಾರ್ಯಗಳು 'ಸ್ಪಂದನತರಂಗ'ಗಳಿಂದಲೇ ಜರುಗುವಂತಹವು. ಈ ತ್ರಿವಿಧ ಕಾರ್ಯಗಳಲ್ಲಿ ಸಿದ್ಧವಾಗುವ ಸ್ಪಂದನ, ತರಂಗಗಳು ಮತ್ತು ಆಗ ವ್ಯಕ್ತವಾಗುವ ವರ್ಣಗಳು ಯಾವ ಯಾವ ರೀತಿಯಲ್ಲಿ ಯಾವ ಯಾವ ಸನ್ನಿವೇಶಗಳಲ್ಲಿ ಹೇಗೆ ಹೇಗೆ ಸಿದ್ಧವಾಗುವುವೋ ಅವುಗಳನ್ನು ಆದೇ ರೀತಿಯಲ್ಲಿ ಅವಿಕೃತವಾಗಿ ತಿಳಿಸುವುದೇ ವೇದಸಾಹಿತ್ಯವಾಗಿದೆ.

ವೇದವು ಅಪೌರುಷೇಯವು :-

ಚತುರ್ಮುಖಬ್ರಹ್ಮನಾದರೂ ಜ್ಞಾನದೃಷ್ಟಿಯಿಂದ ಈ 'ಸ್ಪಂದನ ತರಂಗ'ಗಳ ಸ್ವರೂಪವನ್ನು ಮತ್ತು ಅವುಗಳಲ್ಲಿ ಉತ್ಪನ್ನವಾಗುವ

ವರ್ಣಗಳನ್ನೂ ಅನುಭವಕ್ಕೆ ತೆಗೆದುಕೊಂಡು ನಿತ್ಯವಾಗಿ ಸಿದ್ಧವಿರುವ ಈ ವಿಷಯವನ್ನು ಬಹಿರ್ಮುಖನಾಗಿ ಸ್ಮರಿಸಿ ಘೋಷಿಸಿರುವುದೇ ವೇದಸಾಹಿತ್ಯವಾಗಿದೆ. ಇದು ಬ್ರಹ್ಮನಿಂದ ಸ್ವಯಂ ಸಿದ್ಧವಾದುದಲ್ಲ. ನಿತ್ಯ ಸಿದ್ಧವಾದ ಈ ಸ್ಪಂದನ ಮತ್ತು ತರಂಗಗಳ ಮತ್ತು ತದ್ವ್ಯಕ್ತವರ್ಣಗಳ ಸಹಾಯ ಹೊಂದಿ ಬ್ರಹ್ಮನಾದರೂ ಸೃಷ್ಟಿಕಾರ್ಯವನ್ನು ಸಾಧಿಸುತ್ತಾನೆ. ಈ ಕಾರಣದಿಂದಾಗಿ ವೇದವು ಅಪೌರುಷೇಯವು. ಇದು ನಿತ್ಯವಾದದ್ದೂ ಆಗಿದೆ. ಇವುಗಳಲ್ಲಿ ಉಕ್ತವಾದ ವರ್ಣಗಳನ್ನಾಗಲಿ ಅಥವಾ ಸ್ವರಗಳನ್ನಾಗಲೀ ಬದಲಿಸಲು ಬರುವುದಿಲ್ಲಾ. ಬದಲಿಸಿದಲ್ಲಿ ವೇದವಾಗುವುದಿಲ್ಲ. ತದುಕ್ತ ಪರಿಣಾಮವು ಬದಲಿಸಿದ ವರ್ಣಸ್ವರಗಳ ಉಚ್ಚಾರದಿಂದ ಉಂಟಾಗುವುದಿಲ್ಲ. ಉದಾಹರಣೆಗೆ :–

'ಶ್ರೀರಾಮಚಂದ್ರ' ಎಂಬ ವರ್ಣಗಳನ್ನು ಗಮನಿಸೋಣ. ಇವರಲ್ಲಿನ ವರ್ಣಗಳಾದ



ಈ ರೀತಿ ಸ್ಪಂದನ ತರಂಗರೂಪವೆಂದು ಭಾವಿಸಿ ಸೂಚಿಸಬಹುದು. 'ಶ್ರೀ ಜಾನಕೀ ಕಾಂತ' ಎಂಬ ವರ್ಣಗಳು ಕೂಡಿದ ಪದವೂ 'ಶ್ರೀರಾಮಚಂದ್ರ'ನನ್ನೇ ತಿಳಿಸುತ್ತದೆ. ಆದರೂ, ಅವರ ಸ್ಪಂದನತರಂಗ ಮತ್ತು ಪರಿಣಾಮ ಬೇರೆ ಆಗುತ್ತದೆ ಹೇಗೆಂದರೆ



ಈ ರೀತಿಯ ಸ್ಪಂದನತರಂಗವಾಗುವುದಾದ್ದರಿಂದ ವರ್ಣಗಳನ್ನು ಬದಲಿಸಲು ಆಗುವುದಿಲ್ಲ. ಹೀಗೆಯೇ ಸ್ವರಗಳನ್ನು ಬದಲಿಸಲು ಸಾಧ್ಯವಿಲ್ಲಾ

ಹೇಗೆಂದರೆ ಈ ಕೆಳಗಿನ ವರ್ಣಗಳಲ್ಲಿ 'ರಾ' ಉದಾತ್ತ 'ದ್ರ' ಅನುದಾತ್ತ ಸ್ವರವರ್ಣಗಳಾದರೆ



ಈ ಸ್ಪಂದನ ತರಂಗಸ್ವರೂಪವುಳ್ಳದ್ದಾಗುತ್ತದೆ. ಇದಕ್ಕೆ ಪ್ರತಿಯಾಗಿ ಮೇಲಿನ ವರ್ಣಗಳಲ್ಲಿ 'ಶ್ರೀ' ಮತ್ತು 'ಮ' ಉದಾತ್ತ 'ರಾ' ಮತ್ತು 'ದ್ರ' 'ಅನುದಾತ್ತ' ಸ್ವರವರ್ಣಗಳಾದರೆ ಆಗ

ಈ ಸ್ಪಂದನ ತರಂಗ ಸ್ವರೂಪವೇ ಬೇರೆಯಾಗುತ್ತದೆ(ಇಲ್ಲಿ ರೂಪಿಸಿದ ಸ್ಪಂದನ ಚಿತ್ರಗಳು ನೈಜಚಿತ್ರಗಳಲ್ಲ ಬರೀ ತೋರಿಕೆಗೋಸ್ಕರ ಮಾತ್ರ)

ಮೇಲೆ ತಿಳಿಸಿದಂತೆ, ಉಕ್ತವರ್ಣ ಮತ್ತು ಸ್ವರಗಳ ವ್ಯತ್ಯಾಸದಿಂದ ಸ್ಪಂದನ ಮತ್ತು ತರಂಗಗಳು ಭಿನ್ನಸ್ವರೂಪ ತಾಳುವುವಲ್ಲದೆ, ಅರ್ಥವೂ ಬದಲಾಗುತ್ತದೆ. ಹೀಗೆ ಬೇರೆ ಸ್ವರೂಪ ಹೊಂದಿದ ಸ್ಪಂದನ ತರಂಗಗಳಿಂದ ಯಾವ ಫಲಸಿದ್ಧತೆಗಾಗಿ ಯಾವ ಮಂತ್ರ ಪಠಣಮಾಡಲ್ಪಡುವುದೋ ಆ ಉದ್ದೇಶವು ನೆರವೇರದೆ ಇರುವುದಲ್ಲದೆ, ತದ್ವಿರುದ್ಧಪರಿಣಾಮ ಆಗುವ ಅವಕಾಶ ಉಂಟು. ಹೇಗೆಂದರೆ :– "ಯಥೇಂದ್ರಶತ್ರುಃ ಸ್ವರತೋಽಪ ರಾಧಾತ್" ಇಲ್ಲಿ 'ಇಂದ್ರಶತ್ರು' ಎಂಬ ವೈದಿಕಪದವು, ಜಪಕಾಲದಲ್ಲಿ

ಸ್ವರ ವ್ಯತ್ಯಾಸದಿಂದ ಇಂದ್ರನನ್ನು ಕೊಲ್ಲತಕ್ಕ ಸಂತಾನ ಸಿದ್ಧಿಸಬೇಕಾದವನಿಗೆ, ಇಂದ್ರನಿಂದ ಕೊಲ್ಲಲ್ಪಡುವ ಸಂತಾನಹೊಂದುವ ಅರ್ಥ ಉತ್ಪನ್ನವಾಗಿ ಬಿಟ್ಟು, ಸಂತಾನವು ಇಂದ್ರನಿಂದ ಕೊಲ್ಲಲ್ಪಟ್ಟಿತು, ಎಂಬುದು ವೇದವಿದಿತವಾಗಿದೆ. ಹಾಗೆಯೇ "ನಿಷಾದಸ್ಥಪತಿಂ ಯಾಜಯೇತ್", "ರಾಜಾ ರಾಜಸೂಯೇನ ಯಜೇತ" ಇವೇ ಮುಂತಾದ ಸಂದರ್ಭಗಳಲ್ಲಿ 'ನಿಷಾದ' ಮತ್ತು 'ರಾಜ' ಶಬ್ದಗಳ ಅರ್ಥವನ್ನು ನಿರ್ಣಯಿಸಲು, ಸ್ವರಗಳೇ ಆಧಾರವಾಗಿರುತ್ತವೆ. ಅಂದರೆ ಯಾವನು ನಿಷಾದಜಾತ್ಯುತ್ಪನ್ನನಾಗಿ, 'ಸ್ಥಪತಿ'ಯೂ ಆಗಿರುವನೋ, ಅವನಿಗೆ ಮಾತ್ರ ಉಕ್ತಯಾಗದ ಅಧಿಕಾರ ಸಿದ್ಧಿಸುವುದು'. ಹಾಗೆಯೇ ಯಾವನು ಜಾತ್ಯಾ ಕ್ಷತ್ರಿಯನಾಗಿ, ಪಟ್ಟಾಭಿಷಿಕ್ತನೂ ಆಗಿದ್ದಾನೋ ಅವನು ಮಾತ್ರ 'ರಾಜ' ಎಂಬ ಶಬ್ದಕ್ಕೆ ಅರ್ಥವಾಗುತ್ತಾನೆ. ಸ್ವರವ್ಯತ್ಯಾಸ ಮಾಡಿದರೆ, 'ನಿಷಾದ' ವರ್ಣದಲ್ಲಿ ಹುಟ್ಟಿದವನೇ 'ಸ್ಥಪತಿ' ಯಾಗಿರಬೇಕೆಂಬ ಶಾಸ್ತ್ರನಿಯಮ ಸಿದ್ಧಿಸುವುದಿಲ್ಲ. 'ಸ್ಥಪತಿ'ಯಾದವನು ಯಾವ ವರ್ಣದವನಾದರೂ ಆಗಬಹುದು. ಅದು ಒಂದು ಉದ್ಯೋಗ. ಆ ಉದ್ಯೋಗ ಮಾಡುವವರೆಲ್ಲಾ ಸ್ಥಪತಿಗಳೇ ಎಂದಾಗಿ ಶಾಸ್ತ್ರಸೂಚನೆಗೆ ಲೋಪ ಉಂಟಾಗುವುದು. ಸ್ವರವು ಉಚ್ಚರಿಸಿದ್ದೇ ಆದರೆ, 'ನಿಷಾದ' ಜಾತಿಯಲ್ಲಿ ಹುಟ್ಟಿದವನೂ ಮತ್ತು ಸ್ಥಪತಿಯೂ ಆಗಿರಬೇಕೆಂಬ ಶಾಸ್ತ್ರ ಸೂಚನೆಯು ಸಿದ್ಧಿಸುತ್ತದೆ. ಹೀಗೆಯೇ ನಿರ್ದೇಶಿಸಲ್ಪಟ್ಟ ಸ್ವರೋಚ್ಚಾರದಿಂದ, "ಕ್ಷತ್ರಿಯ ಜಾತಿಯಲ್ಲೇ ಹುಟ್ಟಿ. ಅಭಿಷಿಕ್ತನೂ ಆಗಿದ್ದರೆ ಮಾತ್ರ 'ರಾಜ'ನೆಂದು ಕರೆಸಿಕೊಳ್ಳಲು ಅರ್ಹನಾಗುತ್ತಾನೆ" ಎಂಬ ಶಾಸ್ತ್ರಾಭಿಪ್ರಾಯವು ಸಿದ್ಧವಾಗುತ್ತದೆ. ರಾಜ್ಯಭಾರ ಮಾಡುವ ಕರ್ಮದಿಂದಲೇ ರಾಜತ್ವ ಸಿದ್ಧಿಸುವುದಿಲ್ಲ. ಕ್ಷತ್ರಿಯ ಜಾತಿಯಲ್ಲಿ ಹುಟ್ಟದೇ ಇದ್ದರೂ ಸರಿ. ರಾಜ್ಯಭಾರ ಕರ್ಮಾಚರಣೆಯಿಂದ ರಾಜರೆಂದು ಕರೆಸಿಕೊಳ್ಳಲು ಅರ್ಹರಾಗುತ್ತಾರೆ. ಜಾತಿ ಯಾವುದಾದರೂ ಸರಿ, ಎಂದು ಅರ್ಥಮಾಡಿಯಾರು, ಅದು ಶಾಸ್ತ್ರಾಭಿಪ್ರಾಯವಲ್ಲ. ಜಾತಿ ಎಂಬುದು ಹುಟ್ಟಿದ ಮೇಲೆ ಮಾಡಲ್ಪಟ್ಟ ಕರ್ಮದಿಂದ ಸಿದ್ಧವಾಗುವಂತಹುದಲ್ಲ. ಜಾತಿ ಹುಟ್ಟಿನಿಂದಲೇ ಸಿದ್ಧವಾಗುವಂತಹುದು ಎಂಬ ಸತ್ಯವು, ಈ ಸ್ವರ ನಿಯಮಗಳಿಂದ ಸ್ಪಷ್ಟಪಡಿಸಲಾಗಿದೆ. ಅಲ್ಲದೆ ಈ ಸ್ವರಗಳು ಮೇಲಿನ ಅಭಿಪ್ರಾಯಕ್ಕೆ ವಿರುದ್ಧವಾಗಿ ಅರ್ಥಮಾಡಲು ಅವಕಾಶ ಉಂಟಾಗದಂತೆ ನಿರ್ಣಯಿಸಿ ಮಾಡುವಂಥ ಸಾಧಕಗಳಾಗಿವೆ.

ಈ ಎಲ್ಲ ವಿಮರ್ಶೆಯಿಂದ 'ಸ್ವರ ಮತ್ತು ವರ್ಣ'ಗಳ ಉಚ್ಚಾರಕ್ರಮದಲ್ಲಿ ಪೂರ್ಣಗಮನವು ಅತ್ಯಗತ್ಯ. ಅವುಗಳನ್ನು ಅಲಕ್ಷಿಸಿದ್ದೇ ಆದರೆ ದೇವತಾಸ್ವರೂಪಗಳು, ಭಿನ್ನರೂಪಗಳಾಗಿ ಅನರ್ಥಗಳಾಗುವುವು ಎಂಬುದು ಸ್ಪಷ್ಟವಾಗುತ್ತದೆ.

ಇನ್ನು 'ಸ್ಪಂದನತರಂಗ' ವಿಜ್ಞಾನಕ್ಕೂ, ಜಾತಿಗೂ ಏನು ಸಂಬಂಧ? ಎಂಬುದನ್ನು ತಿಳಿಯುವುದು ಅತ್ಯಗತ್ಯ. ಶಾಸ್ತ್ರದಲ್ಲಿ, ಉಕ್ತಸಂದರ್ಭದಲ್ಲಿ ಅಗತ್ಯವೆಂದು ನಿರ್ದೇಶಿಸಲ್ಪಟ್ಟ ಸ್ಪಂದನವು ಚೆನ್ನಾಗಿ ಸ್ಫೂರ್ತಿಗೊಂಡು ತರಂಗರೂಪದಲ್ಲಿ ಹೊರ ಹೊಮ್ಮುತ್ತಾ, ತಜ್ಜನ್ಯ ದೇವತಾರೂಪವನ್ನು ಪೂರೈಸಬೇಕಾಗಿದೆ. ಆ ರೀತಿಯಲ್ಲಿ ಸ್ಫೂರ್ತಿಗೊಂಡು, ಉಕ್ತದೇವತಾಸ್ವರೂಪವು ಪರಿಪೂರ್ಣಗೊಳ್ಳಬೇಕಾದರೆ ಅಗತ್ಯಗಳೇನೆಂದು, ನಿಷ್ಕರ್ಷೆಯಾಗಿ ತಿಳಿಸಬೇಕಾದದ್ದು ಶಾಸ್ತ್ರದ ನಿಯಮ. ಆ ದೇವತಾರೂಪ ಸಾಧನಾದೃಷ್ಟಿಯಿಂದಲೇ. ವಿಶಿಷ್ಟಜಾತಿಯನ್ನೂ ವಿಶಿಷ್ಟಕರ್ಮನಿರತನನ್ನೂ ಸಂಪಾದಿಸಿ, ಉಕ್ತವಾದ ವೇದಕರ್ಮವನ್ನು ಆಚರಿಸತಕ್ಕದ್ದು, ಎಂದು ಸ್ಪಷ್ಟಪಡಿಸಿರುತ್ತೆ. ಆ ಅರ್ಹತೆ ಉಳ್ಳ ವ್ಯಕ್ತಿಯ ಶಾರೀರಕ ರಚನೆಯು, ತದುಕ್ತ ಸ್ಪಂದನ ತರಂಗಗಳನ್ನು ಸ್ಫೂರ್ತಿಗೊಳಿಸಿ. ಆ ಸ್ಪಂದನ ತರಂಗಗಳು ನಿರ್ದಿಷ್ಟ ದೇವತಾಸ್ವರೂಪಸಾಧಕಸಾಧನವಾಗಿರುತ್ತವೆ. ಹೇಗೆಂದರೆ "ಷಡ್ಜಂ ಮಯೂರೋ ವದತಿ ಗಾವಸ್ತು ಋಷಭಭಾಷಿಣಃ" ಇತ್ಯಾದಿ. ಅಂದರೆ ನವಿಲಿನ ದೇಹದ ರಚನೆಯಾದರೂ 'ಷಡ್ಜಸ್ವರ'ದ ಸ್ಪಂದನತರಂಗ ಸಾಧ ಸಾಧನವಾಗಿದೆ. ಹಾಗೆಯೇ ಹಸುವಿನ ದೇಹರಚನೆಯಾದರೂ 'ಋಷಭ' ಸ್ಪಂದನ ತರಂಗ ಸಾಧಕಸಾಧನವಾಗಿದೆ— ಇತ್ಯಾದ್ಯುಕ್ತಿಗಳು ಜಾತಿ ಮತ್ತು ವ್ಯಕ್ತಿಗಳ ಅಗತ್ಯ ಏತಕ್ಕೆ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಆದ್ದರಿಂದ ಜಾತಿಯೂ ಮತ್ತು ವ್ಯಕ್ತಿಯೂ ಎಲ್ಲಿ ನಿರ್ದೇಶಿತವಾಗಿವೆಯೋ ಆ ಸಂದರ್ಭದಲ್ಲಿ ಆ ಜಾತಿ ಮತ್ತು ಆ ವ್ಯಕ್ತಿ ಸಿದ್ಧವಿರುವ ವ್ಯಕ್ತಿಯಿಂದಲೇ ಉಕ್ತಕ್ರಮವು ಜರುಗಬೇಕಾಗುವುದು. ಹಾಗೆ ಜರುಗಿದರೆ ಮಾತ್ರ, ಉಕ್ತಫಲ ಸಿದ್ಧಿಸುವುದು. ಇದಕ್ಕೆ ವ್ಯತಿರಿಕ್ತವಾಗಿ ವ್ಯಕ್ತಿಗಳು ಪ್ರವೃತ್ತಿಸಿದರೆ, ಉಕ್ತಫಲವು ಸಿದ್ಧಿ ಆಗದೇ ಇರವುದಲ್ಲದೆ, ಅನರ್ಥಗಳೂ ಸಂಭವಿಸಬಹುದು.

ವರ್ಣಗಳ ನೈಜಸ್ವರೂಪವು 'ಸ್ಪಂದನತರಂಗಗಳೇ' ಎಂದು ಸುಲಭವಾಗಿ ಅರಿಯಬೇಕಾದರೆ ಒಂದು ಗ್ರಾಮಾಫ್ರೋನ್ ತಟ್ಟೆಯನ್ನು ತೆಗೆದು ವೀಕ್ಷಿಸಿರಿ. ಅದರಲ್ಲಿ ಕಾಣುವುದಾದರೂ ಖಂಡ ಖಂಡ ತರಂಗಗಳು ಮತ್ತು ಪ್ರತಿ ತರಂಗಗಳಲ್ಲಿ ಸ್ಪಂದನರೇಖೆಗಳು. ಅವುಗಳಲ್ಲಿ ಯಾವ ವರ್ಣಗಳೂ ರೂಪಿತವಾಗಿಲ್ಲ. ಈ ತಟ್ಟೆಯನ್ನು ಯಂತ್ರಕ್ಕೆ ಹಾಕಿ, ಮುಳ್ಳಿನ ಸಹಾಯದಿಂದ ಆಯಾಯ ನಿರ್ದಿಷ್ಟ ಸ್ಪಂದನ ಮತ್ತು ತರಂಗಗಳನ್ನು ಸ್ಫೂರ್ತಿಗೊಳಿಸಿದರೆ, ಶಬ್ದ ಮತ್ತು ವ ರ್ಣ ಗ ಳು ಶ್ರೋತ್ರೇಂದ್ರಿಯಕ್ಕೆ ಗೋಚರವಾಗುತ್ತವೆ. ಹೀಗೆಯೇ ವೇದದಲ್ಲಿನ ವರ್ಣಗಳೂ ಮತ್ತು ಸ್ವರಗಳೂ ಸಹ ನಿರ್ದಿಷ್ಟ ಸ್ಪಂದನ ಮತ್ತು ತರಂಗಗಳ ಸ್ವರೂಪಸೂಚಕಸಾಹಿತ್ಯವಾಗಿದೆ.

'ವೇದ ಸಾಹಿತ್ಯವು' ಸೃಷ್ಟಿ, ಸ್ಥಿತಿ ಮತ್ತು ಲಯ ಸಾಧಕವು :—

ಈ ವಿಮರ್ಶೆಯಿಂದ 'ಶಬ್ದ'ವೇ ಸೃಷ್ಟಿಶಕ್ತಿ, 'ವರ್ಣ'ಗಳೇ ವಿವಿಧ 'ಸ್ಪಂದನ' ಸಂಕೇತಗಳು ಮತ್ತು ಸ್ವರಗಳೇ ವಿವಿಧ 'ತರಂಗ' ನಿರ್ದೇಶಕ ಸಂಕೇತಗಳು, ಮತ್ತು ವೇದಸಾಹಿತ್ಯವು 'ಸೃಷ್ಟಿ' 'ಸ್ಥಿತಿ' ಮತ್ತು 'ಲಯ' ಸಾಧಕ ವಿಶಿಷ್ಟ 'ಸ್ಪಂದನತರಂಗಾತ್ಮಕ' ವಿಜ್ಞಾನಬದ್ಧ ಪ್ರಾಯೋಗಿಕ ಸಾಹಿತ್ಯವೂ ಆಗಿದೆ, ಎಂಬುದಾಗಿ ತಿಳಿದುಬರುತ್ತದೆ.

ವ್ಯಾಕರಣ ಮತ್ತು ಸಂಗೀತಶಾಸ್ತ್ರಗಳಿಂದ ಪುಷ್ಟೀಕರಣ

'ವೇದಸಂಶೋಧನ' ವಿಷಯದ ಪ್ರಥಮಲೇಖನದಲ್ಲಿ 'ವೇದಮಂತ್ರ'ಗಳ ಸ್ವರೂಪವು ಕೇವಲ 'ಸ್ಪಂದನತರಂಗ'ಗಳು ಮಾತ್ರ. ಅವುಗಳಲ್ಲಿ ಉಕ್ತವಾಗಿರುವ ಅಕ್ಷರಗಳು ಆ 'ಸ್ಪಂದನತರಂಗ'ಗಳ ಸಂಕೇತಗಳು ಮಾತ್ರ ಎಂದು ತಿಳಿಸಲಾಗಿದೆ. ಅಲ್ಲದೆ 'ಸ್ಪಂದನತರಂಗ'ಗಳು ಸೃಷ್ಟಿ, ಸ್ಥಿತಿ ಮತ್ತು ಲಯ ಸಾಧಕಗಳು ಎಂದು ಸಹ ತಿಳಿಸಲಾಗಿದೆ.

ಅಕ್ಷರಗಳು ಕೇವಲ ಸ್ಪಂದನತರಂಗಗಳ ಸಂಕೇತಗಳು :—

ಅಕ್ಷರಗಳು ಕೇವಲ 'ಸ್ಪಂದನತರಂಗ'ಗಳ ಸಂಕೇತಗಳು ಎಂಬುದನ್ನೇ ವ್ಯಾಕರಣಶಾಸ್ತ್ರವೂ ಪುಷ್ಟೀಕರಿಸುತ್ತದೆ. ವ್ಯಾಕರಣ ಶಾಸ್ತ್ರಕರ್ತನಾದ ಪಾಣಿನಿಗೆ, ಈಶ್ವರನಿಂದ ಅನುಗ್ರಹಿಸಲ್ಪಟ್ಟ ಯಾವ ಮೂಲ ಸೂತ್ರಗಳುಂಟೋ, ಅವು ಈಶ್ವರನಿಂದ ಕೇವಲ 'ಸ್ಪಂದನತರಂಗ' ರೂಪವಾಗಿ ಅನುಗ್ರಹಿಸಲ್ಪಟ್ಟವೆ. ಯಾವ ವರ್ಣವೂ, ಈಶ್ವರನಿಂದ ಪಾಣಿನಿಗೆ ದತ್ತವಾಗಿಲ್ಲ.

"ನೃತ್ಯಾವಸಾನೇ ನಟರಾಜರಾಜೋ ನನಾದ ಢಕ್ಕಾಂ ನವಪಂಚವಾರಂ ಉದ್ಧರ್ತುಕಾಮಃ ಸನಕಾದಿಸಿದ್ಧಾನೇತದ್ವಿಮರ್ಶೇ ಶಿವಸೂತ್ರಜಾಲಂ ||" (ನಂದಿಕೇಶ್ವರ ಕಾರಿಕೆ) ಈಶ್ವರನು ಪಾಣಿನಿಗೆ ಸಹ. ಮೇಲಿನಂತೆ ಢಕ್ಕಾವಾದನಮಾಡಿ. ಆ 'ಸ್ಪಂದನತರಂಗ'ಗಳ, ನಿತ್ಯಸ್ವರೂಪವನ್ನು ಅನುಗ್ರಹಿಸಿದನು. ಅವುಗಳನ್ನೇ ಪಾಣಿನಿಯು, ವರ್ಣಗಳ ಸಂಕೇತದಿಂದ ವ್ಯಾಕರಣಸೂತ್ರಗಳನ್ನಾಗಿ ಗ್ರಥಿಸಿದ್ದಾನೆ.

"ಅ ಇ ಉಣ್ ||೧|| ಋ ಌಕ್ ||೨|| ಏ ಓ ಙ್ ||೩|| ಐ ಔ ಚ್ ||೪|| ಹ ಯ ವ ರಟ್ ||೫|| ಲಣ್ ||೬|| ಞ ಮ ಙ ಣ ನಮ್ ||೭|| ಝ ಭ ಞ್ ||೮|| ಘ ಢ ಧ ಷ್ ||೯|| ಜ ಬ ಗ ಡ ದ ಶ್ ||೧೦|| ಖ ಫ ಛ ಠ ಥ ಚ ಟ ತವ್ ||೧೧|| ಕಪಯ್ ||೧೨|| ಶ ಷ ಸ ರ್ ||೧೩|| ಹಲ್ ||೧೪|| ಇತಿ ಮಾಹೇಶ್ವರಾಣಿ ಸೂತ್ರಾಣಿ|| (ಲಘುಕೌಮುದಿ)

ಅಂದರೆ ವಾಕ್ ಪ್ರಪಂಚವೆಲ್ಲಾ, ಮೇಲೆ ನಿರ್ದೇಶಿಸಲ್ಪಟ್ಟ. 'ಸ್ಪಂದನ ತರಂಗಾ'ಂತರ್ಗತವು, ವರ್ಣಗಳು. ಸಂಕೇತಗಳು ಎಂಬುದನ್ನೇ ವ್ಯಾಕರಣ ಶಾಸ್ತ್ರವು ಘೋಷಿಸುತ್ತಿದೆ.

ಅಲ್ಲದೆ ಸರ್ವಮಾನವನ ಉದ್ಧಾರವೂ, 'ಈಸ್ಪಂದನತರಂಗ'ಗಳಿಂದಲೇ ಸಾಧ್ಯ ಎಂಬುದು 'ಉದ್ಧರ್ತುಕಾಮ: ಸನಕಾದಿಸಿದ್ಧಾರ್ |' ಎಂಬ ವಾಕ್ಯ ದಿಂದ ಸಿದ್ಧವಾಗುತ್ತದೆ. ಯೋಗಶಾಸ್ತ್ರ, ಮಂತ್ರಶಾಸ್ತ್ರ ಮತ್ತು ಸಂಗೀತ ಶಾಸ್ತ್ರಗಳೂ ಇದನ್ನೇ ಪುಷ್ಟೀಕರಿಸುತ್ತವೆ. ಇಲ್ಲಿ ಸದ್ಯಕ್ಕೆ ಸಂಗೀತಶಾಸ್ತ್ರ ವನ್ನು ವಿಮರ್ಶಿಸಲಾಗುವುದು.

ಸ್ಪಂದನತರಂಗಗಳು ಸೃಷ್ಟಿ, ಸ್ಥಿತಿ, ಲಯಸಾಧಕಗಳು :-

'ಸ್ಪಂದನ ತರಂಗ'ಗಳೇ 'ಸೃಷ್ಟಿ' 'ಸ್ಥಿತಿ' ಮತ್ತು 'ಲಯ' ಸಾಧಕ ಗಳು ಮತ್ತು ವಿಶ್ವದಲ್ಲಿ, ಇವು ನಿತ್ಯವಾಗಿದ್ದು, ಈ ಕಾರ್ಯಗಳನ್ನು ಸಾಧಿಸುತ್ತವೆ. ಆ ನಿರ್ದಿಷ್ಟ 'ಸ್ಪಂದನತರಂಗ'ಗಳ ಸ್ವರೂಪವನ್ನು, ಮಾನವನು ಅರಿತು, ಆ ಕಾರ್ಯಗಳನ್ನು ಸಾಧಿಸಬಹುದು ಎಂಬುದನ್ನು 'ನಾದ' ಶಾಸ್ತ್ರವೆಂದು ಪ್ರಸಿದ್ಧಿಯಾಗಿರುವ, ಸಾಮವೇದೋಪವೇದವಾದ ಸಂಗೀತಶಾಸ್ತ್ರದ ಅವಲೋಕನದಿಂದ, ಹೆಚ್ಚು ವಿಶದವಾಗಿ ಅರಿಯಬಹುದು.

ವಿಶ್ವದಲ್ಲಿ ಸ್ಪಂದನತರಂಗಗಳು :-

"ಜಾತಃ ಷಡ್ಜಸ್ತ್ವಮಾಯಾಂಚ ತ್ವಾರ್ದ್ರರ್ಷ್ಯೇ ಭಾಸ್ಕರೋದಯೇ||"
'ಜಂಬೂದ್ವೀಪೇ' 'ರವಿವಾರೆ' 'ಮಿಥುನರಾಶೌ' (ಭರತಕಲ್ಪಲತಾಮಂಜರಿ)

ಆರ್ದ್ರಾನಕ್ಷತ್ರಯುಕ್ತ ಭಾನುವಾರ ಅಮಾವಾಸ್ಯೆ ಸೂರ್ಯೋದಯ ಕಾಲದಲ್ಲಿ, ಮಿಥುನರಾಶಿಯ ಆರ್ದ್ರಾನಕ್ಷತ್ರದಿಂದ, 'ಸ' ಎಂಬ 'ಷಡ್ಜ ತರಂಗಸ್ಪಂದನ'ವು ಜಂಬೂದ್ವೀಪ ಪ್ರದೇಶಕ್ಕೆ, ಹೊರಹೊಮ್ಮಿ ವಿಶ್ವ ದಲ್ಲೆಲ್ಲಾ ಅನಂತರ ವ್ಯಾಪಿಸುತ್ತದೆ.

'ತ್ರಯೋದಶ್ಯಾಂತು ಮಧ್ಯಾಹ್ನೇ ಋಷಭೋಪುಷ್ಯಋಕ್ಷಕೇ'ಶಾಕ ದ್ವೀಪೇ' 'ಸೌಮ್ಯವಾಸರೇ' ಕಟಕರಾ....(ಭರತಕಲ್ಪಲತಾಮಂಜರಿ)

ಪುಷ್ಯನಕ್ಷತ್ರಯುಕ್ತ ತ್ರಯೋದಶೀ ಬುಧವಾರ ಮಧ್ಯಾಹ್ನ ಕಟಕರಾ ಶಿಯ ಪುಷ್ಯನಕ್ಷತ್ರದಿಂದ 'ಸ್ಪಂದನತರಂಗ'ವು ಜನಿಸಿ, ಶಾಕದ್ವಿಪ ಪ್ರದೇಶಕ್ಕೆ ಪ್ರಸಾರವಾಗಿ, ನಂತರ ವಿಶ್ವದಲ್ಲಿ ಹರಡಿಕೊಳ್ಳುತ್ತದೆ ಇದೇ 'ಋಷಭ' ಸ್ಪಂದನತರಂಗವು 'ರಿ' ಸಂಕೇತಉಳ್ಳದ್ದು. ಈ ರೀತಿಯಲ್ಲಿ ಸಪ್ತಸ್ವರಗಳ 'ಸ್ಪಂದನ ತರಂಗ'ಗಳೂ ವರ್ಣಿತವಾಗಿವೆ.

"ಚೈತನ್ಯಂ ಸರ್ವಭೂತಾನಾಂ ನಿರ್ವೃತಿಂ ಜಗದಾತ್ಮನಾಂ | ನಾದ ಬ್ರಹ್ಮತದಾನಂದಮದ್ವಿತೀಯಮುಪಾಸ್ಮಹೇ |"
(ಶಾರ್ಙ್ಗದೇವ ಸಂಗೀತ ರತ್ನಾಕರಃ)

ಈ ಶ್ಲೋಕದ ಟೀಕೆಯಲ್ಲಿ-ಚೈತನ್ಯಮಿತಿ ಸರ್ವಭೂತಾನಾಂ ಸಕಲ ಪ್ರಾಣಿನಾಂ ಚೈತನ್ಯಂ! ನಾದೋಹಿ ಸ್ಫೋಟಾತ್ಮನಾ ಸಮಸ್ತಪದಾರ್ಥ ಪ್ರಕಾಶಕತ್ವಸಾಧರ್ಮ್ಯೇಣ ಚೈತನ್ಯಾರೋಪವಿಷಯತ್ವಾಚ್ಚೈತನ್ಯಂ| ಜಗದಾತ್ಮತಾ ಪರಿದೃಶ್ಯಮಾನ ಚರಾಚರ ಪ್ರಪಂಚಾಕಾರೇಣ ವಿವೃತ ಮತ್ತತ್ವತೋಽನ್ಯಥಾಭೂತಂ | ನಾದೇ ಶೃತಿವರ್ಣಾದಿ ಸಕಲಶಬ್ದಪ್ರಪಂಚ ಪ್ರತಿಭಾಸಾತ್ಸಾಧರ್ಮ್ಯೇಣ ನಾಮರೂಪಾಲ್ಲಿಖಿತಸ್ಯ ಜಗತೋಽಧಿಷ್ಠಾನ ತ್ವಾರೋಪಾತ್" ಎಂಬುದಾಗಿ ವ್ಯಾಖ್ಯಾತವಾಗಿದೆ. ಅಂದರೆ ಸಕಲ ಚರಾಚರ ವಸ್ತುವಿನಲ್ಲಿ ವ್ಯಕ್ತವಾಗುವ ಚೈತನ್ಯವೂ ಮತ್ತು ವಾಕ್ ಪ್ರಪಂಚದ ಸರ್ವವೂ 'ಸ್ಪಂದನತರಂಗ' ಜನ್ಯವು ಎಂಬುದೇ ಆಗಿದೆ.

ಸಪ್ತಸ್ವರಗಳು :-

"ತಂ ನಾದಂ ಸಪ್ತಧಾ ಕೃತ್ವಾ ತಥಾ ಷಡ್ಜಾದಿಭಿಸ್ವರೈಃ | ಷಡ್ಜೋ ಋಷಭಗಾಂಧಾರೌ ಮಧ್ಯಪಂಚಮ ಧೈವತಾಃ || ನಿಷಾದಶ್ಚೇತಿ ಸಪ್ತೈತೇ ಸ್ವರಾಃ ಪ್ರೋಕ್ತಾ ಮನೀಷಿಭಿಃ || ತೇಷಾಂ ಸಂಜ್ಞಾ 'ಸರಿಗಮಪಧನೀ'ತಿ ಯಥಾಕ್ರಮಂ||' (ಶಾರ್ಙ್ಗ ದೇವ ಸಂಗೀತ ರತ್ನಾಕರಃ)

'ಆ ಸ್ಪಂದನತರಂಗ' ರೂಪದ 'ನಾದ'ವನ್ನು, ಸಂಗೀತಶಾಸ್ತ್ರದ ಚೌಕಟ್ಟಿನಲ್ಲಿ, ಏಳಾಗಿ ವಿಂಗಡಿಸಿ ಅಂಗೀಕರಿಸಿ, ಅವುಗಳಿಗೆ ಕ್ರಮವಾಗಿ 'ಸರಿಗಮಪಧನಿ' ಎಂಬ ಏಳು ಸಂಕೇತಗಳನ್ನು, ಹೇಳಿದ್ದಾರೆ.

"ನಾದೋಪಾಸನಯಾ ದೇವಾ ಬ್ರಹ್ಮವಿಷ್ಣುಮಹೇಶ್ವರಾಃ। ಭವನ್ತ್ಯುಪಾಸಿತಾ ನೂನಂ ಯಸ್ಮಾದೇತೇ ತದಾತ್ಮಕಾಃ॥" (ಶಾ, ಸಂ, ರ,) ಈ ರೀತಿಯಲ್ಲಿ 'ತಸ್ಯ 'ನಾದಸ್ಯ'ನಿತ್ಯತ್ವಮಂಗೀಕೃತ್ಯ ತದಭಿವ್ಯಕ್ತಕ್ರಮಮಾಹ', ವಿಶ್ವದಲ್ಲಿ 'ನಾದದ' ನಿತ್ಯತ್ವವನ್ನು ಮತ್ತು 'ಸೃಷ್ಟಿ' 'ಸ್ಥಿತಿ' ಮತ್ತು 'ಲಯ'ಸ್ವರೂಪ 'ಬ್ರಹ್ಮ' 'ವಿಷ್ಣು' ಮತ್ತು 'ಮಹೇಶ್ವರಾತ್ಮಕ'ವು ಎಂಬುದನ್ನು ಅಂಗೀಕರಿಸಿ, ನಮ್ಮ ದೇಹದಲ್ಲಿ, ಅದು ಅಭಿವ್ಯಕ್ತವಾಗುವ ಕ್ರಮವು ಹೇಳಲಾಗುವುದು.

ದೇಹದಲ್ಲಿ ನಾದೋತ್ಪತ್ತಿ ಕ್ರಮ :

"ಆತ್ಮಾ ವಿವಕ್ಷಮಾಣೋಯಂ ಮನಃ ಪ್ರೇರಯತೇ ಮನಃ ದೇಹಸ್ಥಂ ವಹ್ನಿಮಾಹಂತಿ ಸ ಪ್ರೇರಯತಿ ಮಾರುತಂ ॥ ಬ್ರಹ್ಮಗ್ರನ್ಥಿಸ್ಥಿತಸ್ಸೋಽಥ ಕ್ರಮಾದೂರ್ಧ್ವಪಥೇ ಚರನ್ । ನಾಭಿಹೃತ್ಕಂಠಮೂರ್ಧಾಸ್ಯೇಷ್ವಾವಿರ್ಭವತಿ ಸ ಧ್ವನಿಃ।"

"ನಾದೋಽತಿಸೂಕ್ಷ್ಮಸ್ಸೂಕ್ಷ್ಮಶ್ಚ ಪುಷ್ಟೋಽಪುಷ್ಟಶ್ಚ ಕೃತ್ರಿಮಃ ।
ಇತಿ ಪಂಚಾಭಿಧಾಂ ಧತ್ತೇ ಪಂಚಸ್ಥಾನಸ್ಥಿತಃ ಕ್ರಮಾತ್"
(ಶಾರ್ಙ್ಗದೇವ ಸಂಗೀತರತ್ನಾಕರಃ)

ವಿಚಾರಕ್ಕೊಳಗಾದ ಆತ್ಮನು ಮನಸ್ಸನ್ನು ಪ್ರೇರೇಪಿಸಿ, ವೀಣಾದಂಡಾಂತರ್ಗತ ಸುಷುಮ್ನಾ ಮೂಲದಲ್ಲಿ ಗುದ ಮತ್ತು ಲಿಂಗಗಳ ಅಂತರ ಪ್ರದೇಶದಲ್ಲಿ ಇರುವ, ಅಗ್ನಿಶಿಖಾತ್ರಯ ಚಕ್ರಸ್ಥ ಅಗ್ನಿಶಿಖೆಯನ್ನು ಉತ್ತೇಜಿಸುತ್ತದೆ. ಇಲ್ಲಿನಿಂದ ಒಂಭತ್ತು ಬೆರಳುಗಳ ಮೇಲೆ, ಅಂಡಾಕಾರದ 'ನಾಭಿಕಂದ'ವಿದೆ; ಇದರ ಮಧ್ಯೆ 'ನಾಭಿ' ಚಕ್ರವಿದೆ. ಈ ನಾಭಿ ಚಕ್ರದಲ್ಲಿ 'ಪ್ರಾಣವಾಯು'ವು ಇರುತ್ತದೆ. ಈ ಭಾಗದ 'ಪ್ರಾಣವಾಯು'ವು ಉತ್ತೇಜಿತವಾದ ಅಗ್ನಿಶಿಖೆಯಿಂದ, ಊರ್ಧ್ವಮುಖವಾಗಿ ಪ್ರವಹಿಸುವಂತೆ ಪ್ರೇರೇಪಿತವಾಗಿ, ನಾಭಿ, ಹೃದಯ, ಕಂಠ, ಶಿರಸ್ಸು ಮತ್ತು ಆಸ್ಯಪ್ರದೇಶಗಳಲ್ಲಿ,'ಧ್ವನಿ'ಗೂಡಿ ಪ್ರವಹಿಸುತ್ತದೆ. ಈ ಪ್ರಾಣವಾಯು ನಾಭಿ ಮುಂತಾದ ಸ್ಥಾನಗಳಲ್ಲಿ ಕ್ರಮವಾಗಿ ಅತಿಸೂಕ್ಷ್ಮ, ಸೂಕ್ಷ್ಮ, ಪುಷ್ಟ, ಅಪುಷ್ಟ ಮತ್ತು

ಕೃತ್ರಿಮಧ್ವನಿ ಮಾಡುತ್ತದೆ. ಈ ರೀತಿಯಲ್ಲಿ ಆಸ್ಯದಲ್ಲಿ ವ್ಯಕ್ತವಾಗುವ 'ನಾದ'ವಾದರೂ. ಕೃತ್ರಿಮರೂಪವೂ, ವರ್ಣಗಳು ಸಂಜ್ಞಾರೂಪವೂ ಆಗಿವೆ. ತೇಷಾಂ ಸಂಜ್ಞಾ 'ಸರಿಗಮಪಧನಿ' ಇತಿ

ಸ್ಪಂದನ ತರಂಗಗಳ ವಿವಿಧ ಸ್ವರೂಪಗಳು ಮತ್ತು ನಿರ್ದಿಷ್ಟ ಪರಿಣಾಮಗಳು :—

ಇನ್ನು ಯಾವ ಯಾವ 'ಸ್ಪಂದನತರಂಗ'ಗಳು ಯಾವ ಯಾವ ನಿರ್ದಿಷ್ಟಕಾರ್ಯಸಾಧಕಗಳು ಎಂಬುದನ್ನು ಹೇಳಲಾಗುವುದು.

"ಕೃಪಾವೀರೋದ್ಭುತೋರೌದ್ರೋಭೀಭತ್ಸಶ್ಚ ಭಯಾನಕಃ। ಹಾಸ್ಯ ಶೃಂಗಾರಕಾಶ್ಚೈವ ಷಡ್ಜಾದೀನಾಂ ರಸಾಸ್ಸ್ಮೃತಾಃ"

ಷಡ್ಜಾದಿ ಏಳುವಿಧ ತರಂಗಗಳು ಕ್ರಮವಾಗಿ ಕೃಪಾ, ವೀರ, ಅದ್ಭುತ, ರೌದ್ರ, ಭೀಭತ್ಸ, ಭಯಾನಕ, ಹಾಸ್ಯ ಮತ್ತು ಶೃಂಗಾರರಸಪೂರ್ಣಗಳು. ಇವು ಹಾಡುವವರಲ್ಲಿ, ಕೇಳುವವರಲ್ಲಿ ಮತ್ತು ಸುತ್ತಲಿನ ವಾತಾವರಣದಲ್ಲಿ ತತ್ಪರಿಣಾಮಕಾರಿಗಳಾಗಿವೆ.

ಶೃಂಗಾರ ರಸ ಸಂಪೂರ್ಣೋ 'ಭೂಪಾಳ' ಇತಿ ಕಥ್ಯತೇ ಸದಾ ಹಾಸ್ಯ ರಸಾದ್ಯುಕ್ತೋ 'ವಸಂತ' ಇತಿ ಕೀರ್ತಿತಃ। ವೀರಸ್ಯ ರಸಸಂಪೂರ್ಣೋ 'ನಾಟಕ' ಶ್ಚೇತಿ ಕಥ್ಯತೇ ಭಯಾನಕ ರಸಾಪೂರ್ಣೋ 'ಮಾಳವಃ' ಪರಿಕೀರ್ತಿತಃ। ಭೀಭತ್ಸರಸಸಂಪೂರ್ಣೋ 'ಶ್ರೀರಾಗ' ಇತಿಗೀಯತೇ ಸದಾದ್ಭುತರಸಾಪೂರ್ಣೋ 'ಬಂಗಾಳ' ಇತಿ ಕೀರ್ತಿತಃ। ತತ್ಪುತ್ರೀ ಪುತ್ರ ಮಿತ್ರಾಣಾಂ ಕಳತ್ರಾಣಾಂ ಚ ತದ್ರಸಾಃ। ಸದಾಶಾಂತರಸಾಸ್ಸರ್ವರಾಗ ನಾದಾಶ್ಚಮುಖ್ಯತಃ। ರಸಶತ್ರುವಿಧಾನೇನ ಶತ್ರುರಾಗಪ್ರಕೀರ್ತಿತಃ ॥ 'ವಸಂತಮಾಳವಾ ನಿತ್ಯಂ ಸಾತ್ವಿಕಾ ಇತಿ ಕೀರ್ತಿತಾಃ। ಘನ ಬಂಗಾಳ ಭೂಪಾಳೌ 'ರಾಜಸಾ'ವಿತಿ ಕೀರ್ತಿತೌ। 'ಶ್ರೀರಾಗ' ಫಲ ಮಂಜರ್ಯೌ' ತಾಮಸ್ಯಾವಿತಿ ಕೀರ್ತಿತೇ ॥ (ಭರತಕಲ್ಪಲತಾಮಂಜರಿ)

ಈ ಪ್ರಕಾರದಲ್ಲಿ ಪ್ರತಿಸ್ವರದಲ್ಲಿ, ಪ್ರತಿರಾಗದಲ್ಲಿ ಹೊರಹೊಮ್ಮುವ 'ಸ್ಪಂದನತರಂಗ'ಗಳು, ವಿಶಿಷ್ಟಪರಿಣಾಮಕಾರಿಗಳೆಂದೂ, 'ಸತ್ವರಜಸ್ತಮೋ'ಗುಣಯುಕ್ತಗಳೆಂದೂ ಉಕ್ತವಾಗಿವೆ.

ಸ್ಪಂದನತರಂಗಗಳು ಸರ್ವಸಿದ್ಧಿಕಾರಕಗಳು :—

ಈ 'ಸ್ಪಂದನತರಂಗ'ಗಳು ಸರ್ವಸಿದ್ಧಿಕಾರಕಗಳೆಂಬುದಕ್ಕೆ ಇನ್ನೂ ಆಧಾರಗಳು ಹೀಗಿವೆ—

'ತಾನ'ಗಳನ್ನು ವಿವರಿಸುವಾಗ, ಅವುಗಳ ಫಲಗಳನ್ನು ಈ ರೀತಿ ತಿಳಿಸಲಾಗಿದೆ.

" ಸ್ವಿಷ್ಟಕೃದ್ಬಹುಸೌವರ್ಣೋ ಗೋಸವಶ್ಚ ಮಹಾವ್ರತಃ। ವಿಶ್ವಜಿದ್ಬ್ರಹ್ಮಯಜ್ಞಶ್ಚ ಪ್ರಾಜಾಪತ್ಯಶ್ಚ ಸಪ್ತಮಃ॥ ಕ್ರಮಾದೃಷಭಹೀನಾನಾಂ ತಾನಾನಾಮಭಿದಾ ಇಮಾಃ। ಅಶ್ವಕ್ರಾನ್ತೋ ರಥಕ್ರಾನ್ತೋ ವಿಷ್ಣುಕ್ರಾನ್ತಸ್ತತಃ ಪರಃ। ಸೂರ್ಯಕ್ರಾನ್ತೋ (ಗಜಕ್ರಾನ್ತೋ) ಬಲಿ (ಬಲ) ಭಿನ್ನಾಗಯ(ಪ)ಕ್ಷಕಃ। ಇತಿ ಪಂಚಮ ಹೀನಾನಾಂ ಸಂಜ್ಞಾಃ ಸಪ್ತಕ್ರಮಾನ್ಮತಾಃ॥ ಇತ್ಯಾದಿ. ಇತಿ ಮಾಧ್ಯಮ ಗ್ರಾಮ್ಯೈಕವಿಂಶತಿ ತಾನನಾಮಾನಿ॥" (ಶಾರ್ಙ್ಗದೇವ ಸಂಗೀತ ರತ್ನಾಕರಃ)

"ಯದ್ಯಜ್ಞನಾಮಾಯಸ್ತಾನಸ್ತಸ್ಯ ತತ್ಫಲಮಿಷ್ಯತೇ॥

(ಶಾರ್ಙ್ಗದೇವ ಸಂಗೀತ ರತ್ನಾಕರಃ)

ಅಂದರೆ ವೇದೋಕ್ತಯಜ್ಞಕಾಲದಲ್ಲಿ ವ್ಯಕ್ತವಾಗುವ 'ಸ್ಪಂದನತರಂಗ'ಗಳ ಹೋಲಿಕೆಯುಳ್ಳ 'ಸ್ಪಂದನತರಂಗ'ಗಳು ತದ್ಯಜ್ಞಫಲಪ್ರದಗಳೆಂದು ಹೇಳಲ್ಪಟ್ಟ ತಾನಗಳನ್ನು ಹಾಡುವಾಗ ಅಥವ ಬಾರಿಸುವಾಗ ಹೊರಹೊಮ್ಮುತ್ತವೆ ಮತ್ತು ಆ ಫಲಗಳನ್ನು ಕೊಡುತ್ತವೆ, ಎಂಬುದು ವ್ಯಕ್ತವಾಗುತ್ತದೆ. ಈ ಅದೃಷ್ಟ ಫಲಗಳಲ್ಲದೆ ಎಲ್ಲ ವಿಧ ದೃಷ್ಟ ಫಲಗಳನ್ನೂ ಹೊಂದಬಹುದು. ಹೇಗೆಂದರೆ ಕೆಳಗೆ ಹೇಳುವ ರಾಗಗಳನ್ನು ಅವಲೋಕಿಸಿ. ಉದಾಹರಣೆಗಾಗಿ ಕೆಲವು ಮೂಲರಾಗಗಳನ್ನೂ ಮತ್ತು ತಜ್ಜನ್ಯ ಕೆಲವು ರಾಗಗಳನ್ನೂ ಅವುಗಳ ಸ್ವರಗಳು ಮತ್ತು ಆರೋಹಣ ಮತ್ತು ಅವರೋಹಣ ಕ್ರಮಗಳನ್ನೂ ತಿಳಿಸಲಾಗಿದೆ.

ಹನುಮತ್ತೋಡಿರಾಗ :—

ಆ। ಸ। ರಿ। ೦' ಗ। ೦। ಮ। ೦। ಪ। ಧ। ೦। ನಿ। ೦। ಸ।
೦। ಶು। ೦। ಸಾ। ೦। ಶು। ೦। ೦। ಶು। ೦। ಕೈ। ೦। ಸ।

ತಜ್ಜನ್ಯ :-

1) ಹಿಮವರ್ಧಿನಿರಾಗ :—

ಆರೋಹಣ :

ಸ ರಿ ಮ ಪ ನಿ ಸ

22 26 31 35 42 44

ಅವರೋಹಣ :

ಸ ನಿ ಧ ಪ ಮ ಧ ಮ ಗ ರಿ ಸ

44 42 39 35 31 39 31 29 26 22

2) ಶುಕ್ರವರ್ಧನ ರಾಗ :—

ಆರೋಹಣ :- ಸರಿಗಮಧನಿಸ।

ಅವರೋಹಣ :- ಸನಿಧನಿಪಧಮಪಮರಿಗರಿಮಗಸ॥

ಸೂರ್ಯಕಾನ್ತರಾಗ :-

ಆ। ಸ। ರಿ। ೦। ೦। ಗ। ಮ। ೦। ಪ। ೦। ಧ। ೦। ನಿ ಸ।
೦। ಶು। ೦। ೦।ಅಂ। ಶು। ೦। ೦। ೦। ಚ। ೦। ಕಾ। ಸ।

ತಜ್ಜನ್ಯ :-

1) ಶೌರ್ಯಚಂದ್ರಿಕಾ :-

ಆರೋಹಣ

ಸ	ರಿ	ಗ	ಮ	ಪ	ಧ	ಪ	ಸ

22	26	30	31	35	41	35	44

ಅವರೋಹಣ :

ಸ	ನಿ	ಧ	ಮ	ಗ	ರಿ	ಗ	ಸ



44	43	41	31	30	26	30	22

2) ಜಯಾಭರಣಂ :-

ಆರೋಹಣ । ಸರಿಗಮಧನಿಸ ।
ಅವರೋಹಣ । ಸಧನಿಪಮರಿಗಮರಿಸ ।

(ಭರತಕಲ್ಪಲತಾಮಂಜರಿ)

ಮೊದಲನೇ ರಾಗದ 'ಗ' 'ಧ' 'ನಿ' ಸ್ವರಗಳು, ಎರಡನೇ ರಾಗದ 'ಗ' 'ಧ' 'ನಿ' ಸ್ವರಗಳೂ ಬೇರೆ ಬೇರೆ ಸ್ಪಂದನ ಸಂಕೇತಗಳು ಮತ್ತು ಎರಡುರಾಗದ ಸ್ವ ಭಾ ವ ಗ ಳೂ ಬೇರೆ ಬೇರೆ. ಮೊದಲನೇ ರಾಗದ 'ಹಿಮವರ್ಧಿನಿ' ಸ್ಪಂದನತರಂಗಗಳೂ, ಅದೇ ರಾಗಜನ್ಯ 'ಶುಕ್ರವರ್ಧನಂ' ರಾಗದ 'ಸ್ಪಂದನತರಂಗ'ಗಳೂ, ಹಾಗೆಯೇ ಎರಡನೇ ರಾಗದ 'ಶೌರ್ಯ ಚಂದ್ರಿಕಾ' ಮತ್ತು 'ಜಯಾಭರಣಂ' 'ಸ್ಪಂದನತರಂಗ'ಗಳೂ ಬೇರೆ ಬೇರೆ

ವಿಶಿಷ್ಟರೀತಿಯವು ಎಂಬುದು ಅವುಗಳ ಸ್ವರಗಳು ಮತ್ತು ಆರೋಹಣ ಅವರೋಹಣ ಕ್ರಮಗಳ ಅವಗಾಹನೆಯಿಂದ ಸ್ಪಷ್ಟವಾಗುತ್ತವೆ. ನಿಷ್ಕರ್ಷೆ ಯಾಗಿ ಈ 'ಸ್ಪಂದನ ತರಂಗ'ಗಳನ್ನು ವಾದ್ಯಗಳ ಮೂಲಕವೋ ಅಥವಾ ಹಾಡುಗಾರಿಕೆಯಲ್ಲೋ ಹೊರಹೊಮ್ಮಿಸಿದರೆ 'ಹಿಮವರ್ಧಿನಿ' ರಾಗದಿಂದ ವಾತಾವರಣದಲ್ಲಿ ಮಂಜುಸುರಿಯುತ್ತದೆ 'ಶುಕ್ರವರ್ಧನಂ' ರಾಗದಿಂದ ಕ್ಷೀಣಶುಕ್ರನಿಗೆ 'ಶುಕ್ರಪುಷ್ಟಿ'ಯಾಗುತ್ತದೆ. 'ಶೌರ್ಯಚಂದ್ರಿಕಾ' ದಿಂದ ವ್ಯಕ್ತಿಯಲ್ಲಿ ಶೌರ್ಯಉಂಟಾಗುತ್ತದೆ ಮತ್ತು 'ಜಯಾಭರಣಂ' ರಾಗದಿಂದ ಆರಂಭಿಸಿದ ಕಾರ್ಯದಲ್ಲಿ ಜಯಲಭಿಸುತ್ತದೆ. ಈ ಪರಿಣಾಮವು ಹಾಡು ವವನಲ್ಲೂ, ಕೇಳುವವರಲ್ಲೂ ಮತ್ತು ಸುತ್ತ ಇರುವ ವಾತಾವರಣದಲ್ಲೂ ಉಂಟಾಗುತ್ತದೆ. ಇದಕ್ಕೆ ದಾಖಲೆ ಕೆಲವು ಸಂಗೀತಗಾರರ ಜೀವನ ಚರಿತ್ರೆಗಳಲ್ಲಿ ಲಭ್ಯವಾಗುತ್ತದೆ. ಬೃಂದಾವನ ಕ್ಷೇತ್ರದ ಸ್ವಾಮಿ ಹರಿದಾಸ್ ಶಿಷ್ಯ ಟಾನ್‌ಸೇನ್ 'ತೋಡಿ'ರಾಗ ಹಾಡಿ 'ಜಿಂಕೆಗುಂಪನ್ನು' ಆಕರ್ಷಿಸಿದ್ದು, 'ಮೇಘ'ರಾಗವನ್ನು ಹಾಡಿ ಮಳೆ ಬರಿಸಿದ್ದು, ಹರಿದಾಸರ ಮತ್ತೊಬ್ಬ ಶಿಷ್ಯ, ಬಿಜುಬ್ರಾವು 'ಮೃಗರಂಜಿನಿ ತೋಡಿ'ರಾಗ ಹಾಡಿ ಜಿಂಕೆಯನ್ನು ಆಕರ್ಷಿ ಸಿದ್ದು. 'ಮಲಕೋಶ' ರಾಗಹಾಡಿ ಕಲ್ಲುಕರಗಿಸಿದ್ದು. ಶ್ರೀ ದೀಕ್ಷಿತರು 'ಅಮೃತವರ್ಷಿಣಿ' ರಾಗವನ್ನು ಹಾಡಿ ಮಳೆಬರಿಸಿ ಸಸ್ಯಸಂಪದಭಿವೃದಿ ಪಡಿಸಿದ್ದು ಮತ್ತು ಶ್ರೀ ತ್ಯಾಗರಾಜಭಾಗವತರು 'ಮೃತಸಂಜೀವಿನೀ' ರಾಗ ಹಾಡಿ ಸತ್ತವನನ್ನು ಬದುಕಿಸಿದ್ದು ಇತ್ಯಾದಿ ದಾಖಲೆಗಳು ಇರುವುದಾಗಿ ತಿಳಿದು ಬರುತ್ತದೆ. 'ಸ್ಪಂದನ ತರಂಗ'ಗಳ ಪರಿಣಾಮದ ದೃಷ್ಟಿಕೋಣದಲ್ಲಿ ನೋಡಿದರೆ ವಿಜ್ಞಾನಿಗಳು ಇದರ ಸತ್ಯತೆಯನ್ನು ಒಪ್ಪುವರು. ಇವುಗಳನ್ನು ಮೂಢನಂಬಿಕೆಗಳೆಂದಾಗಲೀ, ಅಮಾನುಷಕೃತ್ಯಗಳೆಂದಾಗಲೀ ಹೇಳದೆ ವಿಜ್ಞಾನದ ನಿಯಮಗಳಿಗೆ ತಕ್ಕಂತೆ ವಿಧಿವತ್ತಾಗಿ ನಡೆಸಿದ ಪರಿಣಾಮ ಗಳೆಂದು ಒಪ್ಪುವರು. 'ಸಂಗೀತ' ಶಾಸ್ತ್ರದಲ್ಲಿ ಮತ್ತು 'ವೇದ'ಗಳಲ್ಲಿ ಯುದ್ಧಕಾಲದಲ್ಲೂ ಮತ್ತು ಶಾಂತಿ ಕಾಲದಲ್ಲೂ ಬಳಸಿಕೊಳ್ಳಲು ಬರುವ ಈ ರೀತಿಯ ರಹಸ್ಯಗಳು ಅನೇಕವಾಗಿವೆ. ಅವುಗಳೆಲ್ಲವನ್ನೂ ವಿವರಿಸು ವುದು ಈ ಲೇಖನಕ್ಕೆ ಮೀರಿದ್ದಾಗಿದೆ. ಇವುಗಳಲ್ಲಿ ಎಲ್ಲಕ್ಕೂ ಮೀರಿದ ಫಲದಾಯಕಗಳು 'ಶ್ರೌತ' ಮತ್ತು 'ಸ್ಮಾರ್ತ' ಕರ್ಮಗಳು. ಇದು ಭಾರತ ವಿಜ್ಞಾನಿಗಳ ಸಿದ್ಧಾಂತ.

ಭಾರತವಿಜ್ಞಾನಿಯ ವರ್ಣನೆ :

ಭಾರತದಲ್ಲಿ ವಿಜ್ಞಾನಿಗಳನ್ನು ಈ ರೀತಿಯಲ್ಲಿ ವರ್ಣಿಸಿದ್ದಾರೆ. ಅವರ ಸ್ವಭಾವವೇನೆಂದರೆ:"ಭವನ್ತಿ ನಿತ್ಯಷಾಲೋಕೇ ಜಿತಾಹಾರಾ ವಿರೇತಸಃ।... ಧ್ಯಾಯನ್ತಃ ಪರಮಂ ಬ್ರಹ್ಮಚಿತ್ತೇಯೋಗವಶೀಕೃತೆ। ಭೂತಾನೀಸ್ವಾತ್ಮನಾ ತುಲ್ಯಂ ಸರ್ವಾಣಿ ಗಣಯನ್ತಿ ತೇ॥ ರುಣಾಪೂರ್ಣ ಹೃದಯಾ ಭವನ್ತಿ ಧರಣೀತಲೇ।ಅನುಗ್ರಹಾಯ ಲೋಕಾನಾಂ ಜಿತಕ್ರೋಧಾಜಿತೇಂದ್ರಿಯಾಃ॥ ದೇಹಮಾತ್ರಭೃತೋ ಭೂಪ ಸಮಲೋಷ್ಟಾಶ್ಮಕಾಂಚನಾಃ॥" ಇತ್ಯಾದಿ. ಈ ರೀತಿಯ ವಿಜ್ಞಾನಿಗಳು 'ವೇದ'ಕರ್ಮಗಳ ಸತ್ಯತೆ ಮತ್ತು ಉತ್ಕೃಷ್ಟತೆಯನ್ನು ಮಾನವನ ಶ್ರೇಯಸ್ಸಿಗಾಗಿ ತಿಳಿಸಿದ್ದಾರೆಯೇ ಹೊರತು ವಂಚಿಸುವುದಕ್ಕಾಗಿ ಅಲ್ಲ. ಜನಸಾಮಾನ್ಯರನ್ನು ವಂಚಿಸಿ, ಅವರು ಯಾವ ಪುರುಷಾರ್ಥವನ್ನೂ ಸಾಧಿಸಿಕೊಳ್ಳಬೇಕಾದದ್ದಿಲ್ಲ. ಅಂಥ ಶ್ರೇಷ್ಠ ವಿಜ್ಞಾನಿಗಳಲ್ಲೊಬ್ಬರಾದ ಶ್ರೀಶಂಕರಭಗವತ್ಪಾದರು ಈ ರೀತಿ ಅಪ್ಪಣೆ ಕೊಡಿಸಿದ್ದಾರೆ.

"ವೇದೋನಿತ್ಯಮಧೀಯತಾಂ ತದುದಿತಂ ಕರ್ಮಸ್ವನುಷ್ಠೀಯತಾಂ ತೇನೇಶಸ್ಯ ವಿಧೀಯತಾಮಪಚಿತಿಃ ಕಾಮ್ಯೇ ಮತಿಸ್ತ್ಯಜ್ಯತಾಂ॥.... ಅಂದಮೇಲೆ 'ವೇದೋಕ್ತಕರ್ಮ'ಗಳ ಸತ್ಯತೆ ಮತ್ತು ಅನುಷ್ಠಾನದ ಅಗತ್ಯ ಎಷ್ಟೆಂದು ಬೇರೆ ಹೇಳುವ ಅಗತ್ಯವಿಲ್ಲ. ಮೇಲಾಗಿ ಉಪನೀತನಾದ ಪ್ರತಿ ವ್ಯಕ್ತಿಯೂ ಪ್ರತಿಶ್ರಾವಣಮಾಸ ಪೂರ್ಣಿಮಾದಿನ ಯಜ್ಞೋಪವೀತಧಾರಣ ಕಾಲದಲ್ಲಿ " ಶ್ರೌತಸ್ಮಾರ್ತನಿತ್ಯಕರ್ಮಾನುಷ್ಠಾನ ಯೋಗ್ಯತಾಸಿದ್ಧ್ಯರ್ಥಂ ಯಜ್ಞೋಪವೀತಧಾರಣಂ ಕರಿಷ್ಯೇ" ಎಂದು ಸಂಕಲ್ಪಮಾಡುತ್ತಾನೆ. ಇದರಿಂದ 'ಶ್ರೌತ' ಕರ್ಮ ಮತ್ತು 'ಸ್ಮಾರ್ತ' ಕರ್ಮ ಆ ವ್ಯಕ್ತಿಯ ಅಗ್ರಧರ್ಮವಾಗಿರುತ್ತದೆ. ಇವುಗಳ ಪೈಕಿ 'ಶ್ರೌತ' ಕರ್ಮವು ಉತ್ಕೃಷ್ಟಪ್ರಜಾ, ಪಶು, ಸಸ್ಯ ಮತ್ತು ಖನಿಜಸಂಪತ್ತುಗಳ 'ಸೃಷ್ಟಿ' ಸಾಧಕವಾಗಿಯೂ 'ಸ್ಮಾರ್ತ'ಕರ್ಮವು ತತ್‌ಸೃಷ್ಟ 'ಸ್ಥಿತಿ'ಸಾಧಕವಾಗಿಯೂ ಅಥವಾ ರಕ್ಷಣಾ ಸಾಧಕವಾಗಿಯೂ ಇರುತ್ತದೆ. ಇದು ನಮ್ಮ ಭಾರತದ ಅಗ್ರವಿಜ್ಞಾನಿಗಳ ಸಿದ್ಧಾಂತ.

ಪ್ರಾಚೀನಪೌರ್ವಾತ್ಯ ಮತ್ತು ಆಧುನಿಕಪಾಶ್ಚಾತ್ಯ ವಿಜ್ಞಾನ ವಿಶೇಷ :

ನಮ್ಮ ಪ್ರಾಚೀನ ವಿಜ್ಞಾನಕ್ಕೂ, ಪಾಶ್ಚಾತ್ಯರ ಆಧುನಿಕ ವಿಜ್ಞಾನಕ್ಕೂ ಒಂದು ಭಾರಿ ವ್ಯತ್ಯಾಸ ಉಂಟು. ಪಾಶ್ಚಾತ್ಯ ಆಧುನಿಕ ವಿಜ್ಞಾನವು ವಿಶೇಷವಾಗಿ 'ಭೂತ'ಪರ ಅಥವಾ 'ಕ್ಷೇತ್ರ'ಪರ ವಿಜ್ಞಾನವಾಗಿದೆ. ಭಾರತೀಯ ವಿಜ್ಞಾನವಾದರೂ ವಿಶೇಷವಾಗಿ 'ಆತ್ಮ'ಪರ ಅಥವಾ 'ಬ್ರಹ್ಮ'ಪರ ಅಥವಾ 'ಕ್ಷೇತ್ರಜ್ಞ'ಪರ ವಿಜ್ಞಾನವಾಗಿದೆ. ಭಾರತವಲ್ಲಿ 'ಭೂತ'ಪರ ವಿಜ್ಞಾನ ಸಹ ಬಹಳ ಉನ್ನತಮಟ್ಟದಲ್ಲಿತ್ತು ಎಂಬುದಕ್ಕೆ ಭಾರತದಲ್ಲಿ ಅನೇಕ ಅವಶೇಷಗಳಿವೆ. ಆದರೂ 'ಆತ್ಮ' ಅಥವಾ 'ಬ್ರಹ್ಮ' ಅಥವಾ 'ಕ್ಷೇತ್ರಜ್ಞ'ಪರ ವಿಜ್ಞಾನವೇ ಭಾರತದ ಗುರಿ ಅದನ್ನು ಸಾಧಿಸಿ ಭೂತ ವಿಜ್ಞಾನಕ್ಕಿಂತ 'ಆತ್ಮ' ವಿಜ್ಞಾನವು ಮಿಗಿಲಾದುದೆಂದು ತೀರ್ಪಿತ್ತಿದ್ದಾರೆ. 'ಆತ್ಮ'ನಿಗೆ 'ಕ್ಷೇತ್ರ' ಆಡಿಯಾಳು. 'ಕ್ಷೇತ್ರ' ಕ್ರಿಯಾಸಿದ್ಧಿ ಎಲ್ಲಾ 'ಆತ್ಮ' ದತ್ತವಾದುದು. 'ಕ್ಷೇತ್ರಜ್ಞ'ನೇ ಅಧಿಕಾರಿ, ಸ್ವತಂತ್ರನು. 'ಭೂತ' ಅಥವಾ 'ಕ್ಷೇತ್ರ' ಅದರ ಅನುಚರ. 'ಆತ್ಮ'ಶಕ್ತ್ಯಭಾವದಲ್ಲಿ 'ಭೂತ'ಕ್ಕೆ ಯಾವಶಕ್ತಿಯೂ ಇಲ್ಲ. 'ಭೂತ'ಶಕ್ತಿ, 'ಕ್ಷೇತ್ರ'ಶಕ್ತಿ. 'ಅತ್ಮ'ಶಕ್ತಿ 'ಬ್ರಹ್ಮಶಕ್ತಿ'. ಈ ಬ್ರಹ್ಮಶಕ್ತಿಯು ಎಲ್ಲವಕ್ಕೂ ಮಿಗಿಲಾದುದು, ಎಂಬುದನ್ನು ವಿಶ್ವಾಮಿತ್ರಮಹರ್ಷಿಯ ಮೂಲಕ ಭಾರತವು ವಿಶ್ವಕ್ಕೆ ಸಾರಿದೆ.

"ಧಿಕ್‌ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋಬಲಂ ಬಲಂ॥" ಎಂಬುದೇ ಆ ಮಹರ್ಷಿಯ ವಿಶ್ವಸಂದೇಶವು. ಅಂದರೆ 'ಕ್ಷೇತ್ರಜ್ಞ'ನಿಗಿಂತ ಉತ್ತಮ ರೀತಿಯಲ್ಲಿ 'ಕ್ಷೇತ್ರ'ವನ್ನು ಉಪಯೋಗಿಸಲು ಯಾರಿಂದಲೂ ಸಾಧ್ಯವಿಲ್ಲ. 'ಕ್ಷೇತ್ರ'ದ ಉತ್ಕೃಷ್ಟಫಲ ದೇಶಕ್ಕೆ ಕರುಣಿಸುವಂತೆ 'ಕ್ಷೇತ್ರಜ್ಞ'ನ ಒಲಿಮೆ ಸಾಧಿಸಿಕೊಳ್ಳುವ ಕ್ರಮವೇ 'ಶ್ರೌತ ಮತ್ತು ಸ್ಮಾರ್ತ' ಕರ್ಮಗಳ ಧ್ಯೇಯ. 'ವೇದ' ಮಂತ್ರಗಳನ್ನು ಉಚ್ಚಾರಮಾಡಿ, ಹವನ ಪದಾರ್ಥಗಳ ಪರಮಾಣುಗಳ ಮೂಲಕ ಮಂತ್ರಗಳಲ್ಲಿ ಅಡಗಿರುವ ಸ್ಪಂದನತರಂಗಗಳನ್ನು, ಯಜ್ಞಪುರುಷನ ಸಹಾಯದಿಂದ, ವಿಶ್ವದಲ್ಲಿ ಹೊರಹೊಮ್ಮಿಸುವುದೇ ತತ್ಫಲಸಾಧಕಗಳಾಗಿವೆ.

ಜನಸಾಮಾನ್ಯರ ತೀರ್ಮಾನ ವಿಮರ್ಶೆ :-

ಈ ಸಂದರ್ಭದಲ್ಲಿ ಜನಸಾಮಾನ್ಯರಲ್ಲಿ ಮೂಡಬಹುದಾದ ತೀರ್ಮಾನಗಳನ್ನು ಕುರಿತು, ವಿಮರ್ಶಿಸದಿದ್ದಲ್ಲಿ ತಪ್ಪಾಗುವುದು. ಏಕೆಂದರೆ 'ಸಂಗೀತ ಶಾಸ್ತ್ರ'ದಿಂದಲೇ 'ವೇದೋ'ಕ್ತಮಹಾಯಜ್ಞಾದಿಗಳ ಫಲಗಳೂ ಸಹ ಲಭಿಸುವುದು ಶಾಸ್ತ್ರಗಳಿಂದಲೂ ಪ್ರತ್ಯಕ್ಷನಾಗಿಯೂ ಸಿದ್ಧಾಂತವಾಗಿರುವಾಗ 'ವೇದೋ'ಕ್ತಕರ್ಮಗಳ ಕಟುನಿಯಮ, ಪದಾರ್ಥಗಳ ಹವನದಿಂದ, ಅಪಾರಪದಾರ್ಥಗಳ ನಷ್ಟ, ಅಪಾರಧನ ವ್ಯಯಮಾಡಿ ಜನಾಂಗಕ್ಕೆ ದ್ರೋಹಮಾಡುವಂತೆ ಆಗುವುದು ನ್ಯಾಯವೆ? ಹೀಗೆ ಅಭಿಪ್ರಾಯವು ಸಾಧಾರಣವಾಗಿ ವಿಮರ್ಶೆಮಾಡುವ ಗುಣವುಳ್ಳವ್ಯಕ್ತಿಯಲ್ಲಿ ಉದ್ಭವಿಸುವುದು ಆದುದರಿಂದ ಇದರ ವಿಮರ್ಶೆಯು ಅಗತ್ಯ.

ಹಿಂದೆಯೇ 'ಸಂಗೀತಶಾಸ್ತ್ರ'ವು 'ಸಾಮವೇದ'ದ ಉಪವೇದ ಎಂದು ತಿಳಿಸಲಾಗಿದೆ. ಇದು ಸ್ವತಂತ್ರಶಾಸ್ತ್ರವಲ್ಲ. ಸಾಮವೇದದ ಒಂದು ಶಾಖೆ. ಮೂಲವನ್ನು ನಾಶಮಾಡಿ ಶಾಖೆಯನ್ನು ಮಾತ್ರ ರಕ್ಷಣೆಮಾಡಿ ಫಲಹೊಂದುತ್ತೇವೆ, ಎಂದರೆ ಶಾಖೆರಕ್ಷಣೆ ಸಾಧ್ಯವೇ? ಫಲದೊರೆಯುತ್ತದೆಯೇ? ಶಾಖೆಯನ್ನಾದರೂ ಅಲಕ್ಷಿಸಬಹುದು. ಮೂಲವನ್ನು ಚನ್ನಾಗಿ ರಕ್ಷಣೆ ಮಾಡಿದರೆ ಬೇಡವೆಂದರೂ ಶಾಖೆ ಪುಷ್ಟವಾಗಿ ಬೆಳೆದು ಉತ್ತಮಫಲವನ್ನು ನೀಡುತ್ತದೆ. ವೇದೋಕ್ತಕರ್ಮಗಳನ್ನು ಕಟ್ಟುನಿಟ್ಟಾಗಿ ಆಚರಿಸಿದರೆ ಆ ಮೂಲಜನ್ಯ ಅರವತ್ತುನಾಲ್ಕು ಕಲೆಗಳಲ್ಲಿ ಪ್ರೌಢಜ್ಞಾನ ಹೊಂದುವ ಶಕ್ತಿಯುಳ್ಳ ವ್ಯಕ್ತಿಗಳು, 'ಕ್ಷೇತ್ರಜ್ಞ'ನ ಕೃಪೆಯಿಂದ ನಮ್ಮ ಮಧ್ಯೆ ಸೃಷ್ಟಿಯಾಗಿ ಆಯಾಯ ಕಲೆಗಳು ಮತ್ತು ಕಲಾವಿದರು ನಮ್ಮ ದೇಶದಲ್ಲಿ, ಉತ್ತಮಮಟ್ಟದಲ್ಲಿ ಇರುವಂತೆ ಆಗುತ್ತದೆ. ಆ ಶಾಖೆಗಳ ಅಭಿವೃದ್ಧಿಗೆ ಹೆಚ್ಚು ಶ್ರಮದ ಅಗತ್ಯವೂ ಬರುವುದಿಲ್ಲ. ಮೂಲವನ್ನು ನಾಶಮಾಡಿಕೊಂಡರೆ ಉತ್ಕೃಷ್ಟಮಟ್ಟದ ಜನಗಳ ಅಭಾವವುಂಟಾಗುತ್ತದೆ. ಆ ಮಟ್ಟದ ಜನರ ಸೃಷ್ಟಿ ನಾವೇ ಮಾಡಿಕೊಳ್ಳುವ ಅಧಿಕಾರ ನಮಗೆ ಇಲ್ಲ. ಆ ಅಧಿಕಾರ ಸೃಷ್ಟಿಕರ್ತನೇ ಇಟ್ಟುಕೊಂಡಿದ್ದಾನೆ. ಆದರೆ ಆ ರೀತಿಯ ಉತ್ಕೃಷ್ಟ ಜನರನ್ನು ನಮಗೆ ಕರುಣಿಸುವಂತೆ ಕರ್ಮ ಮಾಡುವ ಅಧಿಕಾರ ನಮಗೆ ಇರುತ್ತದೆ.

ಕರ್ಮದ ಅಗತ್ಯ :

'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂದು ಭಗವದ್ವಾಕ್ಯವಿದೆ. ಅಂದರೆ ಬೇವಿನಬೀಜ ನೆಡುವುದು, ಬಿಡುವುದು ಅಥವಾ ನೆಟ್ಟದ್ದು ಕಿತ್ತೊಗೆಯುವುದು, ಹಾಗೆಯೇ ಬೇವಿನಬೀಜ ಬಿಟ್ಟು ಮಾವಿನ ಬೀಜ ನೆಡುವುದು, ಬಿಡುವುದು ಅಥವಾ ನೆಟ್ಟದ್ದು ಕಿತ್ತುಬಿಸಾಡುವುದು; ಈ ಕೆಲಸಗಳು ನಮ್ಮ ಇಚ್ಛೆಯವ್ಯಾಪ್ತಿಯಲ್ಲಿವೆ. ಬೇವಿನಬೀಜ ನೆಟ್ಟು, ಮಾವಿನಹಣ್ಣು ಬಿಡುವಂತೆ ಮಾಡುವುದಾಗಲಿ ಅಥವಾ ಮಾವಿನಬೀಜ ನೆಟ್ಟು ಬೇವಿನಹಣ್ಣು ಬಿಡುವಂತೆ ಮಾಡುವುದಾಗಲಿ, ನಮ್ಮ ಇಚ್ಛೆಗೆ ಒಳಪಟ್ಟಿರುವುದಿಲ್ಲ ಬೇವಿನಬೀಜ ಬಿತ್ತಿದ ಕರ್ಮಕ್ಕೆ ಬೇವಿನಹಣ್ಣು ಫಲ, ಮಾವಿನ ಬೀಜ ಬಿತ್ತಿದ ಕರ್ಮಕ್ಕೆ ಮಾವಿನಹಣ್ಣು ಫಲ. ಕರ್ಮಕ್ಕೆ ತಕ್ಕಫಲ ನೀಡುವುದು ಸೃಷ್ಟಿಕರ್ತನ ಅಧೀನಕ್ಕೆ ಒಳಪಟ್ಟಿದೆ. ಆದ್ದರಿಂದಲೇ ಶ್ರೇಷ್ಠಸೃಷ್ಟಿಗಾಗಿ, ಅಂದರೆ ನಮ್ಮ ಜನಾಂಗ ಬಲಿಷ್ಠ ಜನಾಂಗವಾಗಿ ಪ್ರಾಮಾಣಿಕತೆ, ಸಹನೆ, ಒಗ್ಗಟ್ಟು ಮತ್ತು ಉತ್ಕೃಷ್ಟಸಂಪತ್ತು ನಮ್ಮಲ್ಲಿ ಸಿದ್ಧವಾಗಬೇಕಾದರೆ ನಮ್ಮ ಧರ್ಮದಂತೆ ನಾವು ನಡೆಯಬೇಕು. ಏಕೆಂದರೆ .-

"ದೇವತಾ ಬ್ರಾಹ್ಮಣಪರಾಃ ಶೌಚಾಚಾರಹಿತೇರತಾಃ | ಮಹಾಗುಣಾ ಪ್ರಸೂಯನ್ತೇ ವಿಪರೀತಾಸ್ತು ನಿರ್ಗುಣಾ ||"

"ಅಂಗಪ್ರತ್ಯಂಗನಿರ್ವೃತ್ತಿಃ ಸ್ವಭಾವಾದೇವ ಜಾಯತೇ | ಅಂಗ ಪ್ರತ್ಯಂಗನಿರ್ವೃತ್ತೌ ಯೇ ಭವನ್ತಿ ಗುಣಾಗುಣಾಃ | ತೇ ತೇ ಗರ್ಭಸ್ಯ ವಿಜ್ಞೇಯಾ ಧರ್ಮಾಽಧರ್ಮನಿಮಿತ್ತಜಾಃ ||" (ಸುಶ್ರುತಶಾರೀರ)

ಪೂರ್ವಜನ್ಮದ ಧರ್ಮಾಽಧರ್ಮಗಳ ಫಲಕ್ಕೆ ತಕ್ಕಂತೆ ಉತ್ತಮಗುಣಪೂರ್ಣ ಅಥವಾ ಅಧಮಗುಣಪೂರ್ಣ ಸಂತಾನ ಉಂಟಾಗುತ್ತದೆ. ಅಂದರೆ ಉತ್ಕೃಷ್ಟ ಸೃಷ್ಟಿಗಾಗಿ ಪ್ರಪ್ರಥಮವಾಗಿ 'ವೇದೋ'ಕ್ತಕರ್ಮಮಾಡುವುದು ಅಗತ್ಯವು. ಸ್ವಾಮಿ ಹರಿದಾಸ್, ಟಾನ್ಸೆನ್, ತ್ಯಾಗರಾಜರು ಮತ್ತು ದೀಕ್ಷಿತರು ಇಂಥ ಮಹಾವ್ಯಕ್ತಿಗಳ ಸೃಷ್ಟಿಯೇ ಆಗದಿದ್ದಲ್ಲಿ ಸಂಗೀತಕಲೆಯ ಪ್ರೌಢಿಮೆ ಮತ್ತು ಪ್ರಕೃತಿಯ ಮೇಲೆ ಅದರ ಪರಿಣಾಮ ಸಾಧ್ಯ ಎಂಬುದನ್ನು ತೋರಿಸಿಕೊಡುವ ಅವಕಾಶ ಎಲ್ಲಿ ದೊರೆಯುತ್ತಿತ್ತು?

ವೇದ ಮತ್ತು ಚತುಃಷಷ್ಟಿಕಲೆಗಳು :

ಹಾಗಿದ್ದರೆ 'ವೇದೋಕ್ತಕರ್ಮಗಳು ಸಾಕು ಇತರಕಲೆಗಳು ಅನಗತ್ಯ' ಎಂಬ ವಾದವೂ ಸರಿಯಲ್ಲ. ವೇದೋಕ್ತಕರ್ಮಗಳು ಮಹಾಸಮುದ್ರದಂತೆ. ಇತರ ಶಾಸ್ತ್ರಗಳು ಅಥವಾ ಕಲೆಗಳು ಇತರೇ ಜಲಾಶಯಗಳಂತೆ. ಸಮುದ್ರಗಳೂ ಅಗತ್ಯ, ಇತರೇ ಜಲಾಶಯಗಳೂ ಅಗತ್ಯ. ಸಮುದ್ರ ಇತರೇ ಜಲಾಶಯಗಳ ಕಾರ್ಯ ಮಾಡಲಾರದು. ಇತರೇ ಜಲಾಶಯಗಳು ಸಮುದ್ರದ ಕೆಲಸ ಮಾಡಲಾರವು. ಅಲ್ಲದೆ ಇತರೇ ಜಲಾಶಯಗಳ ಅಳಿವು, ಉಳಿವು, ಸಮುದ್ರವನ್ನು ಆಶ್ರಯಿಸಿದೆ. ಸಮುದ್ರವು ಇತರೇ ಜಲಾಶಯಗಳನ್ನು ಆಶ್ರಯಿಸಿಲ್ಲ, ಅದು ಸ್ವತಂತ್ರವು. ಇತರೇ ಜಲಾಶಯಗಳ ಪೋಷಣೆಗೆ ಸದಾ ಸಿದ್ಧವಿರುತ್ತದೆ. ಇದು ಅವುಗಳ ಮೂಲ. ಹೀಗೆಯೇ 'ವೇದ' ಮತ್ತು ತತ್ಪೋಷಿತ 'ಅರವತ್ತುನಾಲ್ಕು ಕಲೆಗಳು'.

ಹಾಗಾದರೆ 'ಯಜ್ಞಫಲ ಸಂಗೀತದಿಂದ ಸಿದ್ಧವಾಗುತ್ತದೆ' ಎಂಬುದು ಅಸಮಂಜಸ, ಕೇವಲ ಔಪಚಾರಿಕ ಅಲ್ಲವೆ ? ಎನ್ನಬಹುದು. ಅಸಮಂಜಸವಲ್ಲ. ಕೆಲವೇ ನಯಾಪೈಸೆಗಳ ಖರ್ಚಿನಲ್ಲಿ ರಸಾಯನಿಕ ದ್ರವ್ಯಗಳ ಮಿಶ್ರಣಮಾಡಿದರೂ, ವಿದ್ಯುಚ್ಛಕ್ತಿ ಉತ್ಪನ್ನವಾಗುತ್ತದೆ. ಅದಕ್ಕೆ ಒಂದು 'ಬಲ್ಬ್' ಜೋಡಿಸಿದರೆ, ಬೆಳಕು ಚೆಲ್ಲುತ್ತದೆ. ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿ ಅಣೆಕಟ್ಟು ಕಟ್ಟಿ ಅದರ ಸಹಾಯದಿಂದ 'ಡೈನಮೋಗಳು' ಚಲಿಸುವಂತೆಮಾಡಿ, ವಿದ್ಯುತ್ ಉತ್ಪನ್ನವಾಗುವಂತೆಯೂ ಮಾಡಬಹುದು. ಇದರೊಂದಿಗೆ ಒಂದು ಬಲ್ಬ್ ಜೋಡಿಸಿದರೂ ಬೆಳಕು ಚೆಲ್ಲುತ್ತದೆ. ಇವೆರಡೂ ಅಸತ್ಯವಲ್ಲ. ವಿದ್ಯುಚ್ಛಕ್ತಿ ಉತ್ಪನ್ನವಾಗುವುದು ಮತ್ತು ಬೆಳಕು ಚೆಲ್ಲುವುದು ಎರಡೂ ಪೂರ್ಣ ಸತ್ಯವು. ಮೊದಲಿನಂತೆ ಅಲ್ಪ ವೆಚ್ಚಮಾಡಿ ಕೈ ಬ್ಯಾಟರಿ ಸಿದ್ಧಮಾಡಿಕೊಳ್ಳುವುದೂ ಅಗತ್ಯ. ಲಕ್ಷಾಂತರ ರೂ. ಖರ್ಚಿನ ವಿದ್ಯುತ್ ಕೇಂದ್ರಗಳೂ ಅಗತ್ಯ. ಅಷ್ಟು ಅಪಾರ ಹಣ ವ್ಯಯವಾಗುತ್ತದೆ. ಆ ಕರ್ಮದಲ್ಲಿ ಅನೇಕ ಸಹಸ್ರ ಎಕರೆ ಉತ್ತಮ ಜಮೀನುಗಳು, ಹಲವಾರು ಗ್ರಾಮಗಳು, ದೇವಾಲಯಗಳು ಮುಳುಗಿ ನಾಶವಾಗುವುದು ಅನಿವಾರ್ಯ. ಬೃಹತ್ಫಲಸಾಧನೆಯಾಗುವುದರಿಂದ ಈ ಆರ್ಥಿಕ ಮತ್ತು ಇತರ ಅಮೂಲ್ಯ

ವಾದ ಪದಾರ್ಥಗಳ ನಾಶವು ಅಧರ್ಮವಾಗುವುದಿಲ್ಲ. ಈ ಸಂದರ್ಭದಲ್ಲಿ 'ಧರ್ಮ'ವೆಂಬುದೇ ಸಿದ್ಧಾಂತವು. ಇದು ಪುಣ್ಯಕಾರ್ಯವು ಎಂಬುದೇ ಧರ್ಮಸೂಕ್ಷ್ಮವು. ಈ ಧರ್ಮಸೂಕ್ಷ್ಮಗಳನ್ನರಿತು, ಎಲ್ಲ ಅಗತ್ಯ ಕರ್ಮಗಳೂ ಯೋಗ್ಯರೀತಿಯಲ್ಲಿ ರಕ್ಷಣೆಯಾಗಿ, ಸಮಾಜದ ಕ್ಷೇಮಸಾಧನೆಯಾಗಬೇಕಾಗಿದೆ. ಅವುಗಳ ಪೈಕಿ ಪ್ರಧಾನವು ಯಾವುದು; ಗೌಣವು ಯಾವುದು ಎಂಬುದನ್ನು ಅರಿತು ಪ್ರಧಾನಕ್ಕೆ ಹೆಚ್ಚು ಗಮನ ಕೊಡಬೇಕಾದುದು ಆದ್ಯ ಕರ್ತವ್ಯವು.

ಇನ್ನೊಂದು ವಿಷಯವೇನೆಂದರೆ—

ಸಂಚಿತ, ಆಗಾಮಿ ಮತ್ತು ಪ್ರಾರಬ್ಧ ಎಂಬ ತ್ರಿವಿಧ ಕರ್ಮಗಳಲ್ಲಿ, ಸಂಚಿತ ಮತ್ತು ಆಗಾಮಿ ಕರ್ಮಗಳನ್ನಾದರೂ ಜ್ಞಾನಾಗ್ನಿಯಿಂದ ದಹಿಸಿ ನಿವೃತ್ತಿ ಮಾಡಿಕೊಳ್ಳಬಹುದು, ಆದರೆ ಪ್ರಾರಬ್ಧಕರ್ಮವನ್ನು ಮಾತ್ರ 'ಅವಶ್ಯಮನುಭೋಕ್ತವ್ಯಂ', 'ಪ್ರಾರಬ್ಧಂ ಭೋಗತೋ ನಶ್ಯೇತ್' ಎಂದು ಶಾಸ್ತ್ರವಿದಿತವಾಗಿರುವಾಗ, ಯಜ್ಞಪಶುವಿಗೆ ಏಕದಾಮುಕ್ತಿ ಹೇಗೆ ಸಾಧ್ಯ? ಎಂಬ ಶಂಕೆ ಉಂಟಾಗುತ್ತದೆ.

ಇದು ಸಾಮಾನ್ಯ ರೀತಿ ನಡೆಯತಕ್ಕದ್ದು. ಬಹುಭಾಗ ಜೀವಿಗಳು ಈ ಮಾರ್ಗದಲ್ಲೇ ನಡೆಯುವುದು ಸತ್ಯ. ಆದರೆ ವಿಶೇಷಸಂದರ್ಭಗಳು ಉಂಟು. ಹೇಗೆಂದರೆ-

"ಪ್ರಾರಬ್ಧಂ ಭುಜ್ಯಮಾನೋ ಹಿ ಗೀತಾಭ್ಯಾಸರತಸ್ಸದಾ| ಸಮುಕ್ತಃ ಸಸುಖೀಲೋಕೇ ಕರ್ಮಣಾ ನೋಪಲಿಪ್ಯತೇ"|| ಎಂಬಗೀತಾವಾಕ್ಯವು ಪ್ರಾರಬ್ಧವನ್ನೂ ಬೇರೇ ರೀತಿಯಿಂದ ನಿವಾರಿಸಿಕೊಳ್ಳಲು ಅವಕಾಶವುಂಟು ಎಂಬ ಭಗವಂತನ ಆದೇಶವನ್ನು ತಿಳಿಸುತ್ತದೆ. ದೃಷ್ಟಾಂತಕ್ಕೆ, ಸೌಭರಿ ಎಂಬ ಋಷಿಗಳು ಪ್ರಾರಬ್ಧಕರ್ಮಾನುಸಾರ ಬರುವ ಎಷ್ಟೋ ಶರೀರಗಳನ್ನು ಯೋಗಾಭ್ಯಾಸದ ಮಹಿಮೆಯಿಂದ,ಬಂದಿದ್ದ ಜನ್ಮದಲ್ಲೇ ಆ ವಿಧವಾದ ಶರೀರಗಳನ್ನು ನಿರ್ಮಿಸಿ, ಆಯಾಯ ಶರೀರಗಳಿಂದ ಅನುಭವಿಸಲ್ಪಡಬೇಕಾದ ಕರ್ಮಫಲಗಳನ್ನೆಲ್ಲಾ ಅನುಭವಿಸಿ, ಮುಕ್ತರಾದರೆಂದು ಪ್ರಸಿದ್ಧಿಯುಂಟು. ಯೋಗಕ್ಕಿಂತಲೂ ಶ್ರೇಷ್ಠವಾದ ವೇದಶಬ್ದ ಶಕ್ತಿಯಿಂದ ಶರೀರ ನಾಶವಾಗಿ ಮುಕ್ತಿಹೊಂದುವುದರಲ್ಲಿ ಸಂಶಯವೇ ಇಲ್ಲ.

ಒಬ್ಬನ ಕರ್ಮವು, ಬೇರೊಬ್ಬನ ಕರ್ಮದಿಂದ ಹೇಗೆ ನಿವಾರಣೆಯಾಗುತ್ತದೆ? ಎಂದು ಪ್ರಶ್ನಿಸಬಹುದು.

ಎಲ್ಲರಿಗೂ ತಮ್ಮ ಕರ್ಮ ತಾವೇ ನಿವಾರಿಸಿಕೊಳ್ಳಬೇಕೆಂಬ ನಿಯಮವಿರುವುದಿಲ್ಲ. ಬೇರೆಯವರ ಕರ್ಮಾಚರಣೆಯಿಂದಲೂ ನಿವಾರಿಸಿಕೊಳ್ಳುವ ಅವಕಾಶ ಶಾಸ್ತ್ರದಲ್ಲಿ ಉಕ್ತವಾಗಿದೆ. ಇದು ನಿತ್ಯದಲ್ಲಿ ನಡೆಯುತ್ತಿರುವ ಕಾರ್ಯ. ಉದಾಹರಣೆಗೆ ಯಾವ ಶ್ರೌತ ಅಥವಾ ಸ್ಮಾರ್ತಕರ್ಮಾನುಷ್ಠಾನವಾಗಲಿ ಜರುಗಬೇಕಾದರೆ, ಯಜಮಾನನಿಂದಲೇ ಸಾಧ್ಯವಿಲ್ಲ. ಬಹುಭಾಗವೆಲ್ಲ ಋತ್ವಿಜರಿಂದಲೇ ಜರುಗತಕ್ಕದ್ದಾಗಿದೆ. ಇನ್ನೂ ವಿಶೇಷವೆಂದರೆ, ಮಹಾತ್ಮರ ಕರ್ಮಗಳಿಂದ, ವೇದಜ್ಞರಿಂದ, ಮತ್ತು ಸಿದ್ಧರಿಂದ ಏಕದಾ ಅನೇಕರ ಕರ್ಮನಾಶವಾಗುತ್ತದೆ ಎಂಬುದು ವ್ಯಕ್ತವಾಗುತ್ತದೆ. ಅಲ್ಲದೆ ಒಬ್ಬ ಮನುಷ್ಯನು ತಾನು ಉತ್ತಮಲೋಕಪ್ರಾಪ್ತಿಗೆ ಯಾವ ವಿಧವಾದ ಧರ್ಮಾನುಷ್ಠಾನ ಮಾಡಿಕೊಳ್ಳದಿದ್ದರೂ ಮೃತಪಟ್ಟಮೇಲೆ ಅವನಿಗಾಗಿ ಬೇರೊಬ್ಬರು ಮಾಡುವ ಕರ್ಮಾನುಷ್ಠಾನದಿಂದ ಅವನಿಗೆ ಉತ್ತಮಗತಿ ಸಿಗುತ್ತದೆನ್ನುವುದು ಶಾಸ್ತ್ರಸಿದ್ಧ. ಹೀಗಿರುವಾಗ ವೇದಸಂಪನ್ನರೂ, ಸಿದ್ಧಪುರುಷರೂ ಮತ್ತೊಬ್ಬರ ಉತ್ತಮತೆಗೆ ಯತ್ನಿಸಿದರೆ ಅದು ಖಂಡಿತವಾಗಿಯೂ ಫಲಕಾರಿಯಾಗುವುದು.

"ನಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ । ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವ" ॥

"ವಿಪ್ರೌಘದರ್ಶನಾತ್ ಸದ್ಯಃ ಕ್ಷೀಯನ್ತೇ ಪಾಪರಾಶಯಃ। ವಾಸನಾನ್ಮಂಗಳಾವಾಪ್ತಿಃ ಅರ್ಚನಾದಚ್ಯುತಂ ಪದಂ ॥" ಎಂಬ ವಾಕ್ಯಗಳು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತವೆ. ಸಿದ್ಧಪುರುಷರ ದೇಹಗಳಿಂದಲೂ, ವೇದಜ್ಞರ ದೇಹಗಳಿಂದಲೂ, ಸಾಮಾನ್ಯ ಜನರ ದೇಹಗಳಿಂದ ಹೊರಹೊಮ್ಮುವ ಸ್ಪಂದನತರಂಗಗಳಿಗಿಂತ, ಉನ್ನತಮಟ್ಟದ ಪರಿಣಾಮಕಾರಿ ಸ್ಪಂದನತರಂಗಗಳು ಹೊರಹೊಮ್ಮುತ್ತವೆ. ಈ ಮೇಲ್ಮಟ್ಟದ ಸ್ಪಂದನತರಂಗಗಳ ವ್ಯಾಪ್ತಿಯಲ್ಲಿ ಬಂದ ಆತ್ಮಗಳಿಗೆ ಪರಿಣಾಮವುಂಟಾಗಿ, ಆ ಆತ್ಮಗಳ ಕರ್ಮದೋಷಗಳು ಕುಗ್ಗುವುದರಿಂದಲೇ ಅಂಥವರ ದರ್ಶನಕ್ಕೆ ಶಾಸ್ತ್ರ ಪ್ರಾಶಸ್ತ್ಯವನ್ನು ಸೂಚಿಸಿದೆ.

ಇದೇ ರೀತಿಯಲ್ಲಿ, ಯಜ್ಞಕಾಲದಲ್ಲಿ ಯಜ್ಞಪಶುವು ಯಜ್ಞಶಾಲೆಯಲ್ಲಿ ಯೂಪಕ್ಕೆ ಕಟ್ಟಲ್ಪಟ್ಟು ಯಜ್ಞಮಂತ್ರಗಳ ಶ್ರವಣಮಾಡಿಸಲ್ಪಡುತ್ತದೆ. ತದ್ದ್ವಾರಾ ಅದು ತ್ರಿವಿಧಕರ್ಮಗಳಿಂದ ಪೃಥಕ್ಕರಿಸಲ್ಪಟ್ಟು ಮುಕ್ತಿ ಹೊಂದುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

ಇನ್ನು ಧರ್ಮದ ವಿಚಾರವಾಗಿ ಸ್ವಲ್ಪ ವಿಮರ್ಶೆಮಾಡುವುದು ಅಗತ್ಯವು :

'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಸುವರ್ಣ ಸಂದೇಶದ ಅಗತ್ಯವನ್ನು ಅರಿಯಬೇಕು. ಆಯಾಯ ವರ್ಣಾಶ್ರಮ ಧರ್ಮಪಾಲಿಸಿ, ಜನಾಂಗದ ಕ್ಷೇಮ ಸಿದ್ಧಿಸುವಂತೆ, ಸರ್ಕಾರ ಮತ್ತು ಪ್ರತಿವ್ಯಕ್ತಿ ಸಹಕರಿಸಬೇಕು. ಎಲ್ಲವೂ ನನಗೇ ಇರಲಿ ಎಂಬ ದುರಾಸೆಯನ್ನು ಬಿಟ್ಟು ನನ್ನ ಧರ್ಮ ಮಾತ್ರ ನನ್ನ ರಕ್ಷಣೆಗೆ ಮತ್ತು ಮೇಲ್ಮೆಗೆ ಎಂದು ಅರಿತು ವರ್ತಿಸಬೇಕು. 'ಇದು ಉತ್ಕೃಷ್ಟ ಧರ್ಮ'ವೆಂದು ಅನ್ಯವರ್ಣದ ಧರ್ಮ ಆಚರಿಸಿದರೆ, ಅದು ಧರ್ಮವಾಗುವುದಿಲ್ಲ. ಅಧರ್ಮವೇ ಆಗುತ್ತದೆ. ತನ್ನ ಧರ್ಮ ಕೀಳೆಂದು ಬಿಡಬಾರದು. ಅದೂ ದುಃಖದಾಯಕವು. 'ಉತ್ಕೃಷ್ಟಧರ್ಮ' ಎಂದರೆ ತನ್ನ ವರ್ಣಕ್ಕೆ ಶಾಸ್ತ್ರದಲ್ಲಿ ಉಕ್ತವಾದ 'ಧರ್ಮ'ಎಂದು ಅರಿಯಬೇಕು. ಉದಾಹರಣೆಗೆ 'ಶ್ರೌತ' 'ಸ್ಮಾರ್ತ' ಕರ್ಮಗಳು ಬ್ರಾಹ್ಮಣನಿಗೆ 'ಉತ್ಕೃಷ್ಟಧರ್ಮ'. 'ಧನುರ್ವೇದೋಕ್ತ' ಕರ್ಮ ಕ್ಷತ್ರಿಯನಿಗೆ ಉತ್ಕೃಷ್ಟಧರ್ಮ 'ಗಾಂಧರ್ವವೇದೋಕ್ತ' (ಸಂಗೀತಶಾಸ್ತ್ರೋಕ್ತ) ಕರ್ಮ, ನಾಟ್ಯಾಚಾರ್ಯನಿಗೆ ಉತ್ಕೃಷ್ಟ ಧರ್ಮ, ಇದಕ್ಕೆ ವಿಪರೀತವು ಅಧರ್ಮವು. ಸರ್ಕಾರವು ಮತ್ತು ಪ್ರಜೆಗಳು 'ಶ್ರೌತ' 'ಸ್ಮಾರ್ತ' ಕರ್ಮಗಳು ಬ್ರಾಹ್ಮಣನಿಂದಲೇ ನಡೆಯುವಂತೆಯೂ, 'ಧನುರ್ವೇದೋಕ್ತ' ಕರ್ಮಗಳು ಕ್ಷತ್ರಿಯನಿಂದಲೇ ನಡೆಯುವಂತೆಯೂ 'ಗಾಂಧರ್ವವೇದೋಕ್ತ' ಕರ್ಮಗಳು ನಾಟ್ಯಾಚಾರ್ಯನಿಂದಲೇ ನಡೆಯುವಂತೆಯೂ, ಕಟ್ಟುನಿಟ್ಟಾದ ನಿಯಮಗಳನ್ನು ಏರ್ಪಡಿಸಿದಲ್ಲಿ, ಆಯಾಯ ಭಾಗಗಳು ಉತ್ಕೃಷ್ಟಸ್ಥಿತಿಯಲ್ಲಿ ಇದ್ದು, ಪ್ರಜೆಗೆ ಉತ್ಕೃಷ್ಟಫಲದಾಯಕಗಳಾಗಿ ಆಗುತ್ತವೆ. ಇಲ್ಲಿ ಒಂದು ಸಂದೇಹ ಬರಬಹುದು. "ಎಲ್ಲ ಶಾಸ್ತ್ರಗಳೂ ಬ್ರಾಹ್ಮಣರಲ್ಲಿ ರೂಢಿಯಾಗಿರುವಂತೆ ಕಾಣುತ್ತದೆ" ಎಂದು. ಎಲ್ಲ ಶಾಸ್ತ್ರ

ಗಳಿಗೂ 'ವೇದ'ವೇ ಮೂಲ. 'ವೇದಜ್ಞ'ರಿಗೆ ಎಲ್ಲ ಕಲೆಗಳ ಪೂರ್ಣ ಸ್ವರೂಪ ಗೊತ್ತು. 'ವೇದಾಧಿಕಾರ' ಇಲ್ಲದ ಇತರೇ ವರ್ಣಗಳಿಗೆ, ವೇದೋಕ್ತ ವಿಷಯಗಳು ಅವರ ಜ್ಞಾನ ಮಟ್ಟದಲ್ಲಿ ಅರಿತು ಆಚರಿಸಿ, ವೇದ ವೇದಾಂತಗಳ ಫಲ ಅವರು ಅನುಭವಿಸಲೆಂಬ ಉದಾತ್ತಧ್ಯೇಯದಿಂದ, ಆ 'ವೇದವೇದಾಂತ'ಗಳ ವಿಷಯವನ್ನೇ ಶಾಸ್ತ್ರಗಳ ರೂಪದಲ್ಲಿ ಸಿದ್ಧಮಾಡಿ ಕೊಟ್ಟಿದ್ದಾರೆ. ಆದರೂ ವೇದೋಕ್ತಕರ್ಮಗಳೇ ಅವರ ಧರ್ಮವು. ಇತರ ಕರ್ಮಗಳನ್ನು ಬಾಕಿಯವರ ಆಚರಣೆಗೆ ಬಿಟ್ಟಿದ್ದಾರೆ, ಎಂಬುದನ್ನರಿಯಬೇಕು

ಶ್ರೌತ ಮತ್ತು ಸ್ಮಾರ್ತಕರ್ಮಗಳ ಸ್ವರೂಪ :

ಕೊನೆಯದಾಗಿ 'ಶ್ರೌತ ಮತ್ತು ಸ್ಮಾರ್ತ' ಕರ್ಮಗಳು ವಿಜ್ಞಾನದ 'ಸ್ಪಂದನ ತರಂಗಗಳ ಪರಿಣಾಮ' ಕೋಣದಲ್ಲಿ ವಿಜ್ಞಾನದ ನಿಯಮಗಳಿಗೆ ಒಳಪಟ್ಟಉತ್ಕೃಷ್ಟಫಲದಾಯಕ 'ಕ್ಷೇತ್ರಜ್ಞ'ಪರ ವೈಜ್ಞಾನಿಕ ಪ್ರಯೋಗವು. ಎಂಬುದು ಸಿದ್ಧಾಂತವಾಗುತ್ತದೆ. ಇದು ಮೌಢ್ಯದಿಂದ ಆಚರಿಸಿದ್ದಲ್ಲ. ಪೂರ್ಣಜ್ಞಾನದಿಂದ ಈ ಪ್ರಯೋಗಗಳನ್ನು ನಮ್ಮ ಪೂರ್ವಜರು ಪದೇ ಪದೇ ಆಚರಿಸಿ ಫಲಹೊಂದಿರುವ ಸಾಕಷ್ಟು ನಿದರ್ಶನಗಳಿವೆ. ಇದು ಒಂದು ಉತ್ಕೃಷ್ಟ ದೇಶರಕ್ಷಣಾಸಾಧನ. ಈಚೆಗೆ ನಾವು ಈ ಕರ್ಮಗಳನ್ನು ಅಲಕ್ಷಿಸಿ, ಪ್ರಜೆಗಳಲ್ಲಿ ಗುಣಹ್ರಾಸವಾಗಿ, ಪರಾವಲಂಬನೆಗೆ ಈಡಾಗಿ ಶತ್ರುಗಳ ಧಾಳಿಗೆ ತುತ್ತಾಗಿ, ದಿಕ್ಕುತೋಚದಂತೆ ಸಂತಪ್ತರಾಗಿದ್ದೇವೆ. ಈ ಸ್ಥಿತಿಯಿಂದ ಮುಕ್ತರಾಗಲು, ಮೇಲಿನ ಸತ್ಯವು, ನಮಗೆ ಜಾಗ್ರತೆ ತಿಳಿಯುವಂತಾಗಬೇಕು. ಪಾಶ್ಚಾತ್ಯ 'ಕ್ಷೇತ್ರ'ಪರ ವಿಜ್ಞಾನಕ್ಕಿಂತ ಮಿಗಿಲಾದ 'ಕ್ಷೇತ್ರಜ್ಞ'ಪರ ವಿಜ್ಞಾನವು 'ವೇದಸಾಹಿತ್ಯ'ವು. ಇದು 'ಕ್ಷೇತ್ರಶಕ್ತಿಗಿಂತ' ಬಲಿಷ್ಠವಾದ 'ಬ್ರಹ್ಮಶಕ್ತಿ' ದೊರಕಿಸಿಕೊಟ್ಟು, ನಮ್ಮನ್ನು ಸ್ವತಂತ್ರರನ್ನಾಗಿ ಮಾಡಬಲ್ಲದು; ಎಂಬುದನ್ನು ಜಾಗ್ರತೆ ಅರಿಯುವಂತೆ ಭಗವಂತನು ಅನುಗ್ರಹಿಸಲಿ.

"ವೇದಗಳು ಸ್ಪಂದನತರಂಗಸಾಹಿತ್ಯವು"

ಆಯುರ್ವೇದದಿಂದ ಪುಷ್ಟೀಕರಣ.

ವೇದಸಂಶೋಧನದ ಹಿಂದಿನ ಎರಡು ಲೇಖನಗಳಿಂದ ಸಿದ್ಧವಾಗುವುದೇನೆಂದರೆ, ವಿಶ್ವದ ಪ್ರತಿಕಾರ್ಯವೂ ಒಂದು ವಿಶಿಷ್ಟರೀತಿಯ ಸ್ಪಂದನ ತರಂಗದಿಂದ ಜರುಗತಕ್ಕದಾಗಿದೆ. 'ಸ್ಪಂದನತರಂಗ'ವು ವಿಶ್ವದ ಅಳತೆಗೋಲು, ಎಂದು ತಿಳಿದುಬರುತ್ತದೆ. ಯಾವ ಯಾವ ವಿಶಿಷ್ಟಸನ್ನಿವೇಶದಲ್ಲಿ ಯಾವ ಯಾವ ವಿಶಿಷ್ಟಸ್ಪಂದನತರಂಗಗಳು ಸಿದ್ಧವಿರುತ್ತವೆಯೋ ಅವನ್ನು ಸ್ಪಷ್ಟೀಕರಿಸಿ, ಅವುಗಳನ್ನು ವರ್ಣಸಂಕೇತದಿಂದ ತಿಳಿಸಿ, ಅವುಗಳನ್ನು ಮಾನವನು ಸ್ವಪ್ರಯೋಜನಕ್ಕೆ ಅಳವಡಿಸಿಕೊಳ್ಳುವ ಕ್ರಮವನ್ನು ತಿಳಿಸಿದ್ದಾರೆ.

ಸರ್ವತೋಮುಖವಾಗಿ ಸ್ಪಂದನತರಂಗಜ್ಞಾನವು ಅಳವಡಿಸಿಕೊಳ್ಳಲಾಗಿದೆ. ವೇದಸಾಹಿತ್ಯವಾದರೂ ಸ್ಪಂದನತರಂಗವಿಜ್ಞಾನಸಾಹಿತ್ಯ ಪೂರ್ಣವು; ಎಂಬುದನ್ನು ಆಯುರ್ವೇದಸಾಹಿತ್ಯವಿಮರ್ಶೆಯಿಂದಲೂ ಸಹ ಅರಿಯಬಹುದಾಗಿದೆ.

ಆಯುರ್ವೇದಚಿಕಿತ್ಸಾತತ್ತ್ವಮೂಲವು 'ಪಂಚಭೂತ'ಗಳು. ಈ ಐದು ಭೂತಗಳ 'ಸ್ಪಂದನತರಂಗ'ಗಳು ವಿಮರ್ಶಿತವಾಗಿವೆ. ಉದಾಹರಣೆಗೆ 'ಪೃಥ್ವೀ' ಭೂತ 'ಸ್ಪಂದನತರಂಗ'ವು 'ಉ' ವರ್ಣೋಚ್ಚಾರ ಸಿದ್ಧ 'ಸ್ಪಂದನತರಂಗ' ಸಮಾನ 'ಸ್ಪಂದನತರಂಗ' ಉಳ್ಳದ್ದು. 'ಅಪ್' ಭೂತವು 'ಋ' ವರ್ಣಸಮಾನ, 'ತೇಜೋ' ಭೂತವು 'ಇ' ವರ್ಣಸಮಾನ, 'ವಾಯು' ಭೂತವು 'ಅ' ವರ್ಣಸಮಾನ 'ಆಕಾಶ' ಭೂತವು 'ಌ' ವರ್ಣಸಮಾನ ಸ್ಪಂದನತರಂಗಗಳುಳ್ಳವಾಗಿವೆ. ಈ ಐದು ವಿಧ ಭೂತಗಳ ವಿವಿಧ ಮೇಳನಗಳಿಂದ, ರಸಾದಿಸಪ್ತಧಾತುಗಳು. ವಾತಾದಿ ತ್ರಿದೋಷಗಳು, ಶರೀರದ ವಿವಿಧ ಅಂಗಗಳೂ ಮತ್ತು ಎಲ್ಲ ಸ್ಥಾವರಜಂಗಮದ್ರವ್ಯಗಳೂ, ತದ್ದ್ರವ್ಯಸಿದ್ಧರಸಗಳೂ, ಸಿದ್ಧವಾಗುತ್ತವೆ. ಈ ಸಮಯಕ್ಕೆ ಕಾರಣಗಳಾದರೂ, ವಿಶಿಷ್ಟರೀತಿಯ 'ಸ್ಪಂದನತರಂಗ'ಗಳೇ ಆಗಿವೆ. ಉದಾಹರಣೆಗಾಗಿ ಕೆಲವನ್ನು ಇಲ್ಲಿ ತಿಳಿಸಲಾಗುತ್ತದೆ.

ಅಂಗೋತ್ಪತ್ತಿ :

"ಹಸ್ತೋಡುರೂಪಪ್ರತಿಪಾದಕಂ ಸಪ್ತತ್ರಿಂಶತ್ಸಿರಾವೃತಂ 'ಗ'ವರ್ಣ ಜ್ಞಾಪಿ ದಕ್ಷಿಣಪಕ್ಷಪದ್ಮಂ ಗರ್ಭಾಶಯಕಾರಕಂ॥ ಚಿತ್ರಾನಕ್ಷತ್ರರೂಪಂ ಸಪ್ತತ್ರಿಂಶತ್ಸಿರಾವೃತ 'ಘ' ವರ್ಣಬೋಧಕವಾಮಪಕ್ಷಪದ್ಮಂ ಪರಿಪೂರ್ಣ ಗರ್ಭಾಶಯಕಾರಣಂ॥"

ಅಂದರೆ 'ಹಸ್ತಾ' ನಕ್ಷತ್ರ ಅಥವಾ 'ಗ' ವರ್ಣ ಇವುಗಳ 'ಸ್ಪಂದನ ತರಂಗ' ಸಮಾನ, ಸ್ಪಂದನತರಂಗವು ತಾಯಿಯ ಬಲಪಾರ್ಶ್ವದ ಪರ ಮಾಣುಗಳಲ್ಲಿ ಸಿದ್ಧವಾಗಿ, ಅಲ್ಲಿನ ಧಾತುಸ್ರಾವಗಳ ಮೂಲಕ ತಾಯಿಯ ಗರ್ಭಾಶಯವನ್ನು ಸೇರಿ, ಆ ಗರ್ಭಾಶಯದಲ್ಲಿರುವ ಗರ್ಭಸ್ಥಶಿಶುವಿನ ಗರ್ಭಾಶಯ ಎಂಬ ಅಂಗದ ಬಲಭಾಗವನ್ನು ರೂಪಿಸುತ್ತದೆ. ಹಾಗೇಯೇ 'ಚಿತ್ರಾ' ನಕ್ಷತ್ರ ಅಥವಾ 'ಘ' ವರ್ಣ, ಇವುಗಳ 'ಸ್ಪಂದನತರಂಗ' ಸಮಾನ, 'ಸ್ಪಂದನತರಂಗ'ವು, ತಾಯಿಯ ಎಡಪಾರ್ಶ್ವದ ಪರಮಾಣುಗಳಲ್ಲಿ ಸಿದ್ಧ ವಾಗಿ. ಧಾತುಸ್ರಾವಗಳ ಮೂಲಕ, ತಾಯಿಯ ಗರ್ಭಾಶಯವನ್ನು ಸೇರಿ, ತದಾಶಯಸ್ಥ ಗರ್ಭಶರೀರದ ಗರ್ಭಾಶಯ ಎಂಬ ಅಂಗವನ್ನು ಪೂರ್ಣ ಗೊಳಿಸಲು ಎಡಭಾಗವನ್ನು ರೂಪಿಸುತ್ತದೆ.

ಶಾರೀರಕ ಕ್ರಿಯೆ :

"ತಿಷ್ಯತಾರಾರೂಪಂ ಸಪ್ತತ್ರಿಂಶತ್ಸಿರಾವೃತಂ 'ಓ' ವರ್ಣಾಶ್ರಿತ ನಾಭಿಪದ್ಮಂ ಶ್ವಾಸಪವನಗತಿಕಾರಕಂ॥"

ಅಂದರೆ 'ಪುಷ್ಯನಕ್ಷತ್ರ' ಅಥವಾ 'ಓ' ವರ್ಣ 'ಸ್ಪಂದನತರಂಗ' ಸಮಾನ 'ಸ್ಪಂದನತರಂಗ'ಗಳು ನಾಭಿದೇಶದಲ್ಲಿ ಸಿದ್ಧವಾಗಿ ಶ್ವಾಸೋಚ್ಛ್ವಾಸ ಸಕ್ರಿಯೆಯನ್ನು ಜರುಗಿಸುತ್ತವೆ.

ರೋಗೋತ್ಪತ್ತಿ :

"ಅಶ್ವಿನೀನಕ್ಷತ್ರಾತ್ಮಕಂ ಸಪ್ತತ್ರಿಂಶತ್ಸಿರಾವೃತಂ 'ಅ' ವರ್ಣಾ ಧಾರಕಪಾದಪದ್ಮಂ ಸರ್ವಶರೀರಾಧಾರಕಂ॥ ಅಶ್ವಿನೀನಕ್ಷತ್ರವಿರುದ್ಧಗತಿ ಹೇತುಗ್ರಹಯುಕ್ತತತ್‌ಕಾಲಾನುಗತ ರಸಾಜೀರ್ಣಜನ್ಯ ಆಮಪಿತ್ತಕ್ರಿಮಿ ವಿಕಾರಕಜ್ವರಾಃ ಪ್ರದೃಶ್ಯನ್ತೇ"

ಅಂದರೆ ಅಶ್ವಿನೀ ನಕ್ಷತ್ರ ಅಥವಾ 'ಅ'ವರ್ಣ 'ಸ್ಪಂದನತರಂಗ' ಸಮಾನ 'ಸ್ಪಂದನತರಂಗ'ಗಳು ಪಾದಾಶ್ರಿತ ಪರಮಾಣುಗಳಲ್ಲಿ ಮತ್ತು ಸಿರೆಗಳಲ್ಲಿ ಇರುತ್ತವೆ. ಇವುಗಳಿಗೆ ವಿರುದ್ಧವಾದ 'ಸ್ಪಂದನತರಂಗ'ಗಳಿಂದ ವೇಧೆ ಉಂಟಾದರೆ ಆಮದೋಷ, ಪಿತ್ತವಿಕಾರ, ಕ್ರಿಮಿವಿಕಾರ ಮತ್ತು ಜ್ವರ ಉತ್ಪತ್ತಿಯಾಗುತ್ತವೆ.

ಚಿಕಿತ್ಸೆ :

"ಅವರ್ಣ ಜ್ಞಾಪಕ ಯಾವತ್ಸಿರಾನಾಲಾವೃತ ಓಷಧಯಃ ಜ್ವರ ಪ್ರಕೋಪ ನಿವರ್ತಕಾಃ"॥

'ಅ' ವರ್ಣ 'ಸ್ಪಂದನತರಂಗ' ಸಮಾನ 'ಸ್ಪಂದನತರಂಗ'ಗಳುಳ್ಳ ಔಷಧಗಳನ್ನು ಪ್ರಯೋಗಮಾಡಿ ಆ 'ಸ್ಪಂದನತರಂಗ'ಗಳನ್ನು ಪುನಃ ಸ್ಥಿರ ಪಡಿಸುವುದೇ ಚಿಕಿತ್ಸೆಯು. ತತ್'ಸ್ಪಂದನತರಂಗ' ಸಾಧಕಗಣವು ಕಟು ರೋಹಿಣೀ ಇತ್ಯಾದಿ ಮೂಲಿಕೆಗಳೆಂದು ಉಕ್ತವಾಗಿವೆ.

ಈ ರೀತಿಯಲ್ಲಿ ಋಗ್ವೇದ ಮತ್ತು ಅಥರ್ವಣ ವೇದಗಳ ಉಪವೇದ ವಾದ 'ಆಯುರ್ವೇದ'ವು ಸಂಪೂರ್ಣವಾಗಿ 'ಸ್ಪಂದನತರಂಗ' ವಿಜ್ಞಾನ ಬದ್ಧವಾಗಿ ರೂಪುಗೊಂಡಿದೆ, ಎಂಬುದು ತಿಳಿದುಬರುತ್ತದೆ. ಆಯುರ್ವೇದ ವಾದರೂ ಹಿಂದೆ ವಿವರಿಸಿದ ವಿಶ್ವದ ಸ್ಥಿರ ತತ್ತ್ವವನ್ನೇ ಪ್ರತಿಪಾದಿಸುತ್ತದೆ.

ಮಂತ್ರಶಾಸ್ತ್ರ ಮತ್ತು ಜ್ಯೋತಿಶ್ಶಾಸ್ತ್ರಗಳಾದರೂ 'ಸ್ಪಂದನತರಂಗ' ವಿಜ್ಞಾನಬದ್ಧವಾದುವು ಎಂಬುದಕ್ಕೆ ಸಾಕಷ್ಟು ಸಾಹಿತ್ಯವಿದೆ. ಇವೆಲ್ಲ ವನ್ನೂ ಪೂರ್ಣವಾಗಿ ವಿಮರ್ಶೆಮಾಡಬೇಕಾದರೆ ಗ್ರಂಥ ಬಹುವಿಸ್ತಾರ ವಾಗುವುದರಿಂದ ಮುಖ್ಯವಾದ ಅಂಶ, ಅಂದರೆ 'ವೇದಸಾಹಿತ್ಯ'ವು ಪರಿ ಪೂರ್ಣಗೊಂಡ 'ಸ್ಪಂದನತರಂಗ' ವಿಜ್ಞಾನಬದ್ಧ ಪ್ರಾಯೋಗಿಕ ಸಾಹಿ ತ್ಯವು. ಅಲ್ಲದೆ ಇದು ಕೇವಲ 'ಕ್ಷೇತ್ರ' ಪರವಿಜ್ಞಾನವಲ್ಲ, ಇದು 'ಕ್ಷೇತ್ರ' ಮತ್ತು 'ಕ್ಷೇತ್ರಜ್ಞ'ಪರ ಪ್ರಾಯೋಗಿಕ ಸಾಹಿತ್ಯವು. ಹೇಗೆಂದರೆ ಇಲ್ಲಿ 'ಅ' ಕಾರಾದಿ 'ಷ'ಕಾರದ ವರೆಗಿನ ಐವತ್ತು 'ಸ್ಪಂದನತರಂಗ'ಗಳನ್ನೂ, ಅಳವಡಿಸಿ

ಕೊಳ್ಳಲಾಗಿದೆ. ಅಲ್ಲದೆ 'ಸ್ವರ'ಯುಕ್ತ'ವರ್ಣಗಳಿಂದ' ಕೂಡಿದ್ದಾಗಿ, ತರಂಗಗಳು ಪರಿಷ್ಕರಿಸಲ್ಪಟ್ಟಿವೆ ಮತ್ತು ಪ್ರತಿಪ್ರಯೋಗವು, ಒಂದು ದೇವತಾಪರವಾಗಿ 'ಕ್ಷೇತ್ರಜ್ಞ'ಪರವಾಗಿಯೇ ಕರ್ಮಗಳು ಉಕ್ತವಾಗಿವೆ. ಈ ಪ್ರಯೋಗದ ಧ್ಯೇಯವಾದರೂ ಅಂದರೆ, ವೇದೋಕ್ತಪ್ರಯೋಗದ ಧ್ಯೇಯವಾದರೂ, ವಿಶ್ವಸ್ಥ 'ಕ್ಷೇತ್ರ' ಮತ್ತು 'ಕ್ಷೇತ್ರಜ್ಞ'ರ ಮೈತ್ರೀಯುತ ಸಹಕಾರ ಪ್ರಾಪ್ತಿಗಾಗಿಯೇ ಆಗಿದೆ. ಆದ್ದರಿಂದಲೇ, ಈ ವೇದೋಕ್ತಕರ್ಮಗಳಿಗೆ, ಇತರೆ ಎಲ್ಲ ಶಾಸ್ತ್ರೋಕ್ತಕರ್ಮಗಳಿಗಿಂತಲೂ, ಮೀರಿದ ಮಾನ್ಯತೆ, ಭಾರತದ ವಿಜ್ಞಾನಿಗಳಿಂದ, ಘೋಷಿಸಲಾಗಿದೆ.

ಕೊನೆಯದಾಗಿ ತಿಳಿಸುವುದೇನೆಂದರೆ ವಿಶ್ವದಲ್ಲಿ ಮನುಷ್ಯಪ್ರಯತ್ನವಿಲ್ಲದೆ, ಸತತವಾಗಿ ಪದಾರ್ಥಗಳ ಸೃಷ್ಟಿ, ಸ್ಥಿತಿ ಮತ್ತು ಲಯಗಳು ಆಗುತ್ತಲೇ ಇವೆ. ಇವುಗಳು ಆಗುತ್ತಿರುವುದು ಹೇಗೆ? ಪಂಚಭೂತ ಕಣಗಳು ವಿಶ್ವದಲ್ಲಿ ಸತತವಾಗಿ ಸಿದ್ಧವಿವೆ. ವಿಶ್ವಾಕಾಶದಲ್ಲ ವಿಶಿಷ್ಟರೀತಿಯ ಸ್ಪಂದನತರಂಗಗಳೂ ಸದಾ ಪ್ರವಹಿಸುತ್ತಿರುತ್ತವೆ. ಅವು ಹೀಗೆ ಪ್ರವಹಿಸುವಾಗ ವಿಶಿಷ್ಟರೀತಿಯ ಸ್ವರೂಪಗಳನ್ನು ಹೊಂದುತ್ತವೆ. ಏಕೆಂದರೆ, ವಿಶ್ವಾಕಾಶವು ಅಂಡಾಕಾರದಲ್ಲಿ ಬಗ್ಗಿರುವುದರಿಂದ. ಇದರ ಪರಿಣಾಮವಾಗಿ ಸ್ಪಂದನತರಂಗಗಳು ವಿಶಿಷ್ಟರೂಪಗಳನ್ನು ಹೊಂದುವಾಗ ಪೃಥಿವ್ಯಾದಿ ಭೂತಕಣಗಳು ಸುತ್ತುವರೆಯಲ್ಪಟ್ಟು, ವಿಶಿಷ್ಟರೀತಿಯ ಪರಮಾಣುಗಳಾಗಿ ಮಾರ್ಪಾಡಾಗಿ ಪದಾರ್ಥಗಳು ಉತ್ಪನ್ನವಾಗುತ್ತವೆ. ಹಾಗೆಯೇ ಸ್ಪಂದನತರಂಗಗಳ ಅನ್ಯರೂಪಗಳಿಂಡ ರಕ್ಷಿತವೂ, ಪುನಃ ಮೂಲಭೂತ ಕಣಗಳಾಗಿ ವಿಭಕ್ತವೂ ಆಗುತ್ತವೆ. ಈ ಕಾರ್ಯಗಳು ಸ್ಪಂದನತರಂಗಗಳ ಸಾಮ್ಯತೆ ಇದ್ದಕಾಲದಲ್ಲಿ ಸಮರಸವಾಗಿ ಜರಗುತ್ತಿರುತ್ತವೆ.

ಈ ಸ್ಪಂದನತರಂಗಗಳಲ್ಲಿ ವೈಷಮ್ಯ ಉಂಟಾದರೆ, ಇವುಗಳ ರೂಪಗಳು ವಿಕೃತಗಳಾಗಿ, ಕ್ಷಾಮಡಾಮರಗಳು ಉದ್ಭವಿಸುತ್ತವೆ. ಇವುಗಳ ಸಾಮ್ಯತೆಯನ್ನು ಪುನಃ ಸಿದ್ಧಮಾಡಿಕೊಳ್ಳಲು ಉಕ್ತವಿಧಿಪೂರ್ವಕ ಯಜ್ಞಯಾಗಾದಿಗಳ ಆಚರಣೆ ಅಗತ್ಯವೆಂದು ಅರಿತು ಆಚರಿಸಿ, ನಮ್ಮ ಪೂರ್ವಜರು ಉತ್ಕಟಪರಿಸ್ಥಿತಿಗಳಿಂದ ಪಾರಾಗಿದ್ದಾರೆ.

ಅಲ್ಲದೆ, ಮಾನವನಿಂದ ಸಿದ್ಧವಾಗುವ ಪದಾರ್ಥಗಳಾದರೂ ಎಷ್ಟು? ಈ ಸ್ಪಂದನತರಂಗಗಳಿಂದ ತಯಾರಾಗುವ ಪದಾರ್ಥಗಳನ್ನು ಒಂದು ಹಿಮಾಲಯದಷ್ಟು ಎಂದು ಭಾವಿಸಿದರೆ, ಮಾನವನಿಂದ ಸಿದ್ಧವಾಗುವುದು ಒಂದು ಪರಮಾಣುವಿನಷ್ಟು ಎಂದರೆ ಹೆಚ್ಚಾಗಲಾರದು. ಈ ಸತ್ಯವನ್ನಾದರೂ ಅರಿತರೆ, ಯಜ್ಞಯಾಗಾದಿಗಳ ಮಹತ್ವ ಮತ್ತು ಅವುಗಳ ಆಚರಣೆಯ ಅಗತ್ಯ ಮತ್ತು ವೇದಸಾಹಿತ್ಯದ ವೈಶಿಷ್ಟ್ಯ ಸ್ಪಷ್ಟವಾಗುವುದು.



...ಲ್ಲಿ ದೊರೆಯುವ ಇತರ ಪುಸ್ತಕಗಳು

	ರೂ.	ಪೈ.
...ಸರಿ ಮತ್ತು ಬಾಣಂತಿತನದ ಕೈಪಿಡಿ ...ಖಕರು ಎಸ್. ಎಸ್. ಸುಬ್ರಹ್ಮಣ್ಯಶಾಸ್ತ್ರೀ)	1	00
2. Elements & atoms in Greek and Indian thought(by N.S. Subramanya Sastry)	3	50
3. ಶ್ರೀ ಧನ್ವಂತರಿ ಪೂಜಾಕಲ್ಪ (ಕಥಾನುವಾದ ಸಹಿತ) ಪ್ರಕಾಶಕರು: ಆ॥ವಿ,॥ ಆ॥ ಶಾಸ್ತ್ರರತ್ನ ಇತ್ಯಾದಿ ಪಂ॥ ಗೋಪಾಲಕೃಷ್ಣಾವಧಾನೀ	0	50

4. ಶ್ರೀ ವಿಮಲಾನಂದನಾಥ ವಿರಚಿತ
'ತಾರಾಭಕ್ತ ತರಙ್ಗಿಣೀ'
"ಚಣ್ಡ್ಯುಪಾಸನ ಪದ್ಧತಿಃ"
(ಮುದ್ರಣದಲ್ಲಿದೆ)

ಪ್ರಕಾಶಕರು:

ಆಯುರ್ವೇದ ವಿದ್ವಾನ್ ಆ॥ ಶಾಸ್ತ್ರರತ್ನ ಇತ್ಯಾದಿ
ಪಂಡಿತ ಗೋಪಾಲಕೃಷ್ಣಾವಧಾನೀ
ಗಣೇಶ ಆಯುರ್ವೇದ ವೈದ್ಯಶಾಲಾ
ನಂ. 3, ವಿ. ವಿ. ಮಾರ್ಕೆಟ್,
ಮೈಸೂರು–4